
ಜನಪದ ಸೇವಕ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ–೫ ಏಪ್ರಿಲ್–೨೦೦೫ ಸಂಚಿಕೆ–೯



ಹೊಸ ಗ್ರಾಮ ಪಂಚಾಯಿತಿಗಳು ಎಷ್ಟು ಹೊಸ, ಎಷ್ಟು ಸ್ವತಂತ್ರ ?

ಜನಪದ ವಿಚಾರದಲ್ಲಿ

೧. ಹೊಸ ಪಂಚಾಯಿತಿಗಳು ಎಷ್ಟು ಹೊಸ? ಎಷ್ಟು ಸ್ವತಂತ್ರ?

– ಸುರೇಂದ್ರ ಕೌಲಗಿ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬೇರಿನಂತಿರುವ ಗ್ರಾಮ ಪಂಚಾಯಿತಿಗಳು ಆರೋಗ್ಯಕರವಾಗಿಲ್ಲದಿದ್ದರೆ ವೃಕ್ಷರೂಪದ ಪ್ರಜಾತಂತ್ರವು ದುರ್ಬಲಗೊಳ್ಳುವುದು. ಇಂಥ ದುಃಸ್ಥಿತಿಯಿಂದ ನಮ್ಮ ಪ್ರಚಲಿತ ಗ್ರಾಮ ಪಂಚಾಯಿತಿಗಳು ದೂರವಾಗಿಲ್ಲವೆಂಬುದರ ಬಗ್ಗೆ ಕಳವಳ ಈ ಲೇಖನದಲ್ಲಿ ವ್ಯಕ್ತಗೊಂಡಿದೆ. ಪುಟ–೦೩

೨. ಕತ್ತರಿ ಪ್ರಯೋಗ.

– ಬಳ್ಕೂರು ಸುಬ್ರಾಯ ಅಡಿಗ.

ಎಲ್ಲರೂ ತಮ್ಮ ಜೀವಿತದ ಕೊನೆಯವರೆಗೂ ಬಯಸುವುದು ಕಪ್ಪು ಕೂದಲನ್ನೆ. ಆದರೆ ಪ್ರಕೃತಿ ಕೇಳಬೇಕಲ್ಲ? ನರೆಗೂದಲು ಒಂದಲ್ಲ ಒಂದು ವಯಸ್ಸಿನಲ್ಲಿ ಖಂಡಿತ ಕಾಣಿಸಿಕೊಳ್ಳುತ್ತದೆ. ಆವಾಗ ಕತ್ತರಿ ಪ್ರಯೋಗ ಪ್ರಾರಂಭವಾಗುತ್ತದೆ. ಹಾಸ್ಯ ವಿಚಾರದಿಂದ ಕೂಡಿದ ಈ ಲೇಖನ ಉದ್ಬೋಧಕವೂ, ಮನೋರಂಜಕವೂ ಆಗಿದೆ.

ಪುಟ–೦೮

೩. ಕೃಷಿ ಕೆಲಸಗಾರರ ಸಮಸ್ಯೆಗಳು.

–ಟಿ. ಕೆ. ವಾಸುದೇವ ಭಟ್.

ದೇಶದ ಎಲ್ಲ ಅಭಿವೃದ್ಧಿ ಯೋಜನೆಗಳಿಂದ ವಂಚಿತರಾಗಿರುವವರು ಕೃಷಿ ಕಾರ್ಮಿಕರು. ಅವರ ಸಮಸ್ಯೆಗಳನ್ನು ಕುರಿತಾದ ಗಂಭೀರ ವಿಚಾರಗಳು ಈ ಲೇಖನದಲ್ಲಿವೆ.

ಪುಟ–೧೩

೪. ಕನ್‌ಫ್ಯೂಷಿಯಸ್ ಹಾಗೂ ಚೀನೀ ಸಾಹಿತ್ಯ.

–ಶಿವರಾಮಯ್ಯ.

ಇಂದು ಪ್ರಪಂಚದಲ್ಲಿ ಚೀನಾ ದೇಶವು ದೊಡ್ಡ ಶಕ್ತಿದೇಶವಾಗಿ ಬೆಳೆಯುತ್ತಿದೆ. ಆ ಶಕ್ತಿಗೆ ಮೂಲವಾದ ಚೀನೀ ಸಾಹಿತ್ಯದೆಡೆ ಗಮನಹರಿಸುವ ಪ್ರಯತ್ನ ಈ ಲೇಖನದಲ್ಲಿದೆ. ಚೀನಾದ ಬಗ್ಗೆ ಆಸಕ್ತಿ ಇರುವವರೆಲ್ಲ ಓದಬೇಕಾದಂಥ ಲೇಖನವಿದು.

ಪುಟ–೧೯

೫. ಇಚ್ಛಾ ನಿಗ್ರಹ.

–ಶ್ರೀ ಚಂದ್ರಶೇಖರ ಭಾರತಿ

ನಮ್ಮ ಇಂದಿನ ಎಲ್ಲ ಭೌತಿಕ ಜೀವನದ ಕಷ್ಟ ಪರಂಪರೆಗಳಿಗೆ ನಮ್ಮ ಇಚ್ಛೆಗಳನ್ನು ನಿಗ್ರಹಿಸದಿರುವುದೇ ಪ್ರಮುಖ ಕಾರಣವಾಗಿದೆ. ಆದ್ದರಿಂದ ಇಚ್ಛಾನಿಗ್ರಹದ ಮಹತ್ವವನ್ನು ಶ್ರೀ ಚಂದ್ರಶೇಖರ ಭಾರತಿಯವರು ಈ ಲೇಖನದಲ್ಲಿ ಹೇಳಿದ್ದಾರೆ.

ಪುಟ–೨೫

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್-೨೦೦೫
ಸಂಪುಟ ೫
ಸಂಚಿಕೆ ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆(08236)298754

e-mail - janapada@yahoo.com
www.janapada.org

ತಮ್ಮಟೆ ಬಾರಿಸಲು ಹೇಳಬೇಡಿ !

ನಿಮ್ಮ ಹುಲಿವೇಶಕ್ಕೆ ನಮ್ಮನ್ನು
ತಮ್ಮಟೆ ಬಾರಿಸಲು ಹೇಳಬೇಡಿ !
ಷೆಡ್ಯೂಲ್ ಕಾಸ್ಟ್ ಮತ್ತು ಷೆಡ್ಯೂಲ್ ಟ್ರೈಬಿನ
ಗಂಡಬೇರುಂಡ
ನೆಲದ ಮೇಲೆ ನೆಲೆ ಕಾಣದೆ ಗೂಡು ಕಟ್ಟದೆ
ಆ ತ್ರಿಶಂಕು ಸ್ವರ್ಗದಲ್ಲೇ ಹಾರಾಡಿ
ಶತಮಾನವೇನು ಸಹಸ್ರಮಾನಗಳಿಂದ ಚೀರಾಡಿ
ಬಯಕೆಯ ಆ ಶೂನ್ಯದಲ್ಲೇ ಮಾತಾಡಿ
ನನಸಾಗದ ಕನಸುಗಳಲ್ಲಿ ಕನವರಿಸಿ ಸುಸ್ತಾಗಿದೆ-
ನಮ್ಮನ್ನು ತಮ್ಮಟೆ ಬಾರಿಸಲು ಹೇಳಬೇಡಿ !
'ನಿಮ್ಮ ಚಿಂತೆ ನಿಮಗೆ ಸಾಲದೇ' ಎಂದು
ನಮ್ಮ ಭಾಗ್ಯವಿಧಾತ ಎಚ್ಚರಿಸುತ್ತಿದ್ದಾನೆ-
ನೀವು ಹೇಳುವಂತೆ
ನಿಮಗೂ ನಮಗೂ ಇರುವ ನಂಟನ್ನು
ನೀವು ಒಪ್ಪುವುದಾದರೆ-
ನೀವು ಆಕ್ರಮಿಸಿರುವ ನೆಲವನ್ನು
ನಮಗೆ ಹಂಚಿಕೊಡಿ,
ನೀವು ಅತಿಕ್ರಮಿಸಿರುವ ಮನೆಯಲ್ಲಿ ಪಾಲುಕೊಡಿ,
ಕಿತ್ತುಕೊಂಡಿರುವ ಯಜಮಾನಿಕೆಯನ್ನು
ಸಮ ಸಮ ವಹಿಸಿಕೊಡಿ !
ಇದೊಂದು ಕೇಳಿದರೆ ಕೊಡುವುದಿಲ್ಲವಾದರೆ
ನಾವು ನಿಮ್ಮ ತಿಪ್ಪೆಗೆ
ಕಸಕಡ್ಡಿ ಗೊಬ್ಬರವಾಗಲು ಒಪ್ಪುವವರಲ್ಲ !
ನಾವು ನಮ್ಮ ತಮ್ಮಟೆಯನ್ನು
ಮಾರಿಯ ಢಕ್ಕೆಯಾಗಿ
ಜಗಜೀವನ ರಾಮರ ಡಮರುಗವಾಗಿ
ಬಾಬಾ ಅಂಬೇಡಕರರ ಡಿಂಡಿಮವಾಗಿ
ಮಲೆಯ ಮಾದೇಶ್ವರನ ಪಾಂಚಜನ್ಯವಾಗಿ
ದಿಕ್ಕು ದಿಕ್ಕಿಗೆ ಮೊಳಗಿಸಿ
ಮಾರ್ಮೊಳಗಿಸಿ
ವಿಜಯ ಪತಾಕೆಯನ್ನು
ನಿಮ್ಮ ಕೋಟೆ ಕೊತ್ತಲಗಳ ಮೇಲೆ ಹಾರಿಸಿ-ಆಗ
ನಮ್ಮ ತಮ್ಮಟೆಯನ್ನು ಬಾರಿಸುತ್ತೇವೆ !

-ಡಾ॥ ಎಲ್. ಬಸವರಾಜು

ವಿಚಾರ ದೀಪ್ತಿ

ದೀರ್ಘ ಕಾಲದಿಂದಲೂ ಬೆಂಗಳೂರು ಸಾಕಷ್ಟು ಸ್ವಚ್ಛವೂ, ಹಸಿರೂ ಆಗಿತ್ತು. ಈಗ ಅದು "ಅಭಿವೃದ್ಧಿ"ಯ ಕಾರಣದಿಂದಾಗಿ, ಮುಖ್ಯವಾಗಿ ಮಾಹಿತಿ ತಂತ್ರಜ್ಞಾನದ ಹುಚ್ಚಿನಿಂದಾಗಿ ಅತ್ಯಂತ ಹೆಚ್ಚು ಕಶ್ಮಲಗೊಂಡ ನಗರಗಳಲ್ಲಿ ಒಂದಾಗಿದೆ. ರಸ್ತೆಯ ಅಗಲೀಕರಣಕ್ಕಾಗಿ, ಮೇಲುರಸ್ತೆಗಳ ನಿರ್ಮಾಣಕ್ಕಾಗಿ, ಹೊಸ ಬಡಾವಣೆಗಳ ನಿರ್ಮಾಣಕ್ಕಾಗಿ, ವಿದ್ಯುತ್ ತಂತಿಗಳನ್ನು ಅಳವಡಿಸುವುದಕ್ಕಾಗಿ ಅನೇಕ ಮರಗಳನ್ನು ಕಡಿಯಲಾಗಿದೆ. ಈ ಕಾರಣದಿಂದ ಕಳೆದ ಮೂರು ವರ್ಷಗಳಿಂದ ಜಲಕ್ಷಾಮ ಉಂಟಾಗಿದೆ.

ಅರವತ್ತೈದು ಲಕ್ಷ ಜನಸಂಖ್ಯೆಯ ನಗರದಲ್ಲಿ ಸುಮಾರು ಮೂರು ಲಕ್ಷ ಅಂದರೆ ಶೇ. ೫ ಕ್ಕೂ ಕಡಿಮೆಯಷ್ಟು ಜನರು ಮಾಹಿತಿ ತಂತ್ರಜ್ಞಾನ ವಲಯಕ್ಕೆ ಸೇರಿದವರಾಗಿದ್ದಾರೆ. ಆದರೆ ನಗರ ಜೀವನ ಈ ಜನರ ಇಚ್ಛಾನಿಚ್ಛೆಯನ್ನವಲಂಬಿಸಿದೆ. ಅವರು ಸೀನಿದಲ್ಲಿ ಸರ್ಕಾರಕ್ಕೆ ಶೀತವಾಗುತ್ತದೆ! ಅವರಿಗೆ ಒಳ್ಳೆಯ ಸಂಬಳವಿದೆ ಮತ್ತು ಅವರು ಮೇಲ್ವರ್ಗಸಮಾಜದ ಗಟ್ಟಿದನಿಯಾಗಿದ್ದಾರೆ. ಸರ್ಕಾರವು ಅವರಿಗೆ ಭೂಮಿ ಕೊಡಲು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲು ಬಾಗುತ್ತಲೇ ಇರುತ್ತದೆ. ಆದರೆ ಮಾಹಿತಿ ತಂತ್ರಜ್ಞಾನವು ಸರ್ಕಾರಕ್ಕೆ ತಂದುಕೊಡುವ ಆದಾಯ ಮಾತ್ರ ಶೂನ್ಯ. ಎಂಬತ್ತು ರಸ್ತೆಗಳನ್ನು ೧೩೫ ಕಿ.ಮೀ. ದೂರದವರೆಗೆ ಅಗಲೀಕರಣಗೊಳಿಸುವುದರಿಂದ ಪರಿಸರವನ್ನು ಸ್ವಾಭಾವಿಕವಾಗಿ ಬಹಳಷ್ಟು ಹಾಳುಗೈಯಲಾಗುತ್ತದೆ. ಆ ಮಹಾನ್ ಮೆಟ್ರೋ ರೈಲು ಯೋಜನೆ, ಇನ್ನೂ ಅನೇಕ ಮರಗಳು ಕಣ್ಮರೆಯಾಗುವಂತೆ ಮಾಡುತ್ತದೆ. ಕೊನೆಗೆ ನಮಗೆ ಉಳಿಯುವುದು ಕೇವಲ ರಸ್ತೆಗಳು, ಕಟ್ಟಡಗಳು. ಜೊತೆಗೆ ಭಯಂಕರವಾದ ಧಗೆ ಹಾಗೂ ಮಲಿನಗೊಂಡ ನಗರ. ಮರಗಳ ಕಡಿಯುವಿಕೆ ನಿಶ್ಚಯವಾಗಿಯೂ ಗಂಡಾಂತರಕ್ಕೆ ದಾರಿ. ಮರಗಳ ಇಲ್ಲದಿರುವಿಕೆಯಿಂದಾಗಿ ನೆಲದ ಉಷ್ಣತೆ ಮತ್ತು ಹವಾಮಾನದ ಉಷ್ಣತೆ ಹೆಚ್ಚಾಗುತ್ತದೆ. ಅದರಿಂದಾಗಿ ನೀರಿನ ಅಭಾವ ಉಂಟಾಗುತ್ತದೆ. ಹೆಚ್ಚುತ್ತಾಹೋಗುವ ವಾಯುಮಾಲಿನ್ಯವು ಉಸಿರಾಟದ ತೊಂದರೆಗಳಿಗೆ ಕಾರಣವಾಗುತ್ತದೆ. ಫ್ಯಾನ್‌ಗಳು ಮತ್ತು ಹವಾನಿಯಂತ್ರಣ ಉಪಕರಣಗಳಿಗಾಗಿ ಜನ ಮೊರೆಹೋಗಬೇಕಾಗುತ್ತದೆ. ತತ್ಪರಿಣಾಮವಾಗಿ ವಿದ್ಯುಚ್ಛಕ್ತಿಗೆ ಹೆಚ್ಚು ಬೇಡಿಕೆಯುಂಟಾಗುತ್ತದೆ. ಆಗ ಸರ್ಕಾರ ಸಹಜವಾಗಿಯೇ ವಿದ್ಯುತ್ ಪೂರೈಕೆಯನ್ನು ಕಡಿತಗೊಳಿಸುತ್ತದೆ ಮತ್ತು ವಾರಕ್ಕೊಮ್ಮೆ ನೀರಿನ ಪೂರೈಕೆಯನ್ನೂ ಸಹ! ಆ ಶೇ.೫ರಷ್ಟು ಜನರಿಗೆ ಯಾವ ತೊಂದರೆಯೂ ಆಗುವುದಿಲ್ಲ. ಏಕೆಂದರೆ ಅವರು ಹವಾನಿಯಂತ್ರಿತ ಮನೆಗಳಲ್ಲಿ ಬಹಳಷ್ಟು ನೀರಿನ ಶೀಸೆಗಳೊಂದಿಗೆ ಮತ್ತು ಇತರೆ ತಂಪು ಪಾನೀಯಗಳೊಂದಿಗೆ ವಾಸಿಸುತ್ತಾರೆ. ಅವರು ತಮ್ಮದೇ ಆದ ವಿದ್ಯುತ್ ವ್ಯವಸ್ಥೆ ಹೊಂದಿರುತ್ತಾರೆ. ಈ ರೀತಿ ಸಂಭವಿಸದಂತೆ ನಾವು ನೋಡಿಕೊಳ್ಳಬೇಕು.

–ನಾರಾಯಣ ಕೆ. ಎಸ್.

ಹೊಸ ಗ್ರಾಮ ಪಂಚಾಯಿತಿಗಳು ಎಷ್ಟು ಹೊಸ, ಎಷ್ಟು ಸ್ವತಂತ್ರ?

-ಸುರೇಂದ್ರ ಕೌಲಗಿ.

(ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರವಿದ್ದಷ್ಟೂ ಜನತೆಗೆ ಹೆಚ್ಚು ಒಳ್ಳೆಯದು.)

– ಗಾಂಧೀ.

(ಹರಿಜನ ಪತ್ರಿಕೆ, ಡಿಸೆಂಬರ್ ೨೧, ೧೯೪೭.)

ಕಳೆದ ತಿಂಗಳುತಾನೆ ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆ ನಡೆದು ಹನ್ನೊಂದು ಸಾವಿರಕ್ಕೂ ಹೆಚ್ಚು ಜನ ಪಂಚಾಯಿತಿಗಳಿಗೆ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ. ಈ ಸದಸ್ಯರಲ್ಲಿ ಮಹಿಳೆಯರೂ, ಹಿಂದುಳಿದ ವರ್ಗಗಳ ಜನರೂ ಇದ್ದಾರೆ. ಯುವಕರೂ ಇದ್ದಾರೆ. ಆದ್ದರಿಂದ ರಾಜ್ಯದ ಎಲ್ಲ ಗ್ರಾಮಗಳಲ್ಲಿ ಒಂದು ಬಗೆಯ ರಾಜಕೀಯ ಗಾಳಿ ಬೀಸುತ್ತಿದೆ. ಇದುವರೆಗೆ ನಾಲ್ಕು ವರ್ಷಗಳಿಂದ ಅಸ್ತಿತ್ವದಲ್ಲಿದ್ದ ಹಳೆ ಗ್ರಾಮ ಪಂಚಾಯಿತಿಗಳು ಹೊಸ ಪಂಚಾಯಿತಿಗಳಿಗೆ ಅಧಿಕಾರದ ಜವಾಬ್ದಾರಿಯನ್ನು ಹಸ್ತಾಂತರಿಸಲಿವೆ. ಗ್ರಾಮಗಳಲ್ಲಿ ಒಂದು ಕ್ರಾಂತಿ ನಡೆಯುತ್ತಲಿದೆ. ಇಂಥ ಸಂದರ್ಭದಲ್ಲಿ ಗ್ರಾಮಗಳಲ್ಲಿ ಏನಾದರೂ ಹೊಸ ಚಿಂತನೆ, ಹೊಸ ಕಾರ್ಯವಿಧಾನ, ಹೊಸ ಸಾಧನೆಗಳ ಕುರಿತಾದ ಪ್ರಯತ್ನಗಳು ನಡೆಯಬಹುದೇ ಎಂದು ಆಲೋಚಿಸುವುದು ಸೂಕ್ತವೆನಿಸುತ್ತದೆ. ಈಗಿರುವ ಗ್ರಾಮಗಳು ಮೊದಲಿನಂತೆಯೇ ಇರಬೇಕೆ ಅಥವಾ ಅವು ಹೊಸ ರೂಪ, ಹೊಸ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಳ್ಳಬೇಕೆ ಎಂಬ ಪ್ರಶ್ನೆಗಳಿಗೆ ಉತ್ತರಿಸುವುದೂ ಅಗತ್ಯವೆನಿಸುತ್ತದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ಗ್ರಾಮಗಳು ತಮ್ಮ ಅಸ್ತಿತ್ವವನ್ನೂ, ವ್ಯಕ್ತಿತ್ವವನ್ನೂ ಕಳೆದುಕೊಳ್ಳುತ್ತಿರುವುದರಿಂದ ಈ ಪ್ರಶ್ನೆಗಳು ಇನ್ನಷ್ಟು ಗಂಭೀರವಾಗಿವೆ. ಈ ಸಂದರ್ಭದಲ್ಲಿ ಗಾಂಧೀಜಿ ಹೇಳಿದ ಈ ಮಾತು ನೆನಪಾಗುತ್ತದೆ. ಅವರ ಪ್ರಕಾರ "ಹಳ್ಳಿಗಳು ಅಳಿದರೆ ಭಾರತವೂ ಅಳಿಯುತ್ತದೆ." ಇಂಥ ದುರಂತ ಭಾರತಕ್ಕೆ ಒದಗುವ ಮೊದಲೇ ಗ್ರಾಮಗಳ ಪುನಾರಚನೆಯ ಸಾಧ್ಯಾಸಾಧ್ಯತೆ ಕುರಿತು ಹೊಸ ಗ್ರಾಮ ಪಂಚಾಯಿತಿಗಳ ರಚನೆಯ ಸಂದರ್ಭದಲ್ಲಿ ಆಲೋಚಿಸಬೇಕಿದೆ. ಎಲ್ಲರಿಗೂ ತಿಳಿದಂತೆ ಭಾರತದ ಗ್ರಾಮಗಳು ಕೇವಲ ಕೆಲವು ಸಾವಿರ ಜನರ ವಸತಿ ಸ್ಥಾನವಾಗಿದ್ದಿರದೆ ಅವು ದೇಶದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮುಂತಾದ ಜನಜೀವನದ ಎಲ್ಲ ಕ್ಷೇತ್ರಗಳ ಆಧಾರ ಸ್ತಂಭವಾಗಿವೆ.

ಇದು ಇಂದು-ನಿನ್ನೆಯ ಮಾತಲ್ಲ. ವೇದಗಳ ಕಾಲದಿಂದಲೂ ಇರುವಂಥ ಮಾತು. ದೇಶದಲ್ಲಾದ ಹತ್ತಾರು ಬಗೆಯ ಸ್ಥಿತ್ಯಂತರಗಳ ಪರಿಣಾಮ ಗ್ರಾಮಗಳ ಮೇಲೆ ಆಗದೇ ಇಲ್ಲ. ಆದರೂ ಸಹ ಭಾರತೀಯ ಗ್ರಾಮಗಳು ವಿಶಿಷ್ಟ ಸಂಸ್ಕೃತಿ, ವಿಶಿಷ್ಟ ಜೀವನ ವಿಧಾನದ ನೆಲೆಬೀಡಾಗಿ ಉಳಿದುಕೊಂಡೇ ಬಂದಿವೆ.

ಸ್ವಾತಂತ್ರ್ಯನಂತರ ಹಳ್ಳಿಗಳ ಮಹತ್ವವನ್ನರಿತ ಸರ್ಕಾರಗಳು ಅವುಗಳ ಸುಧಾರಣೆಗಾಗಿ ಪ್ರಯತ್ನ ಮಾಡುತ್ತಲೇ ಬಂದಿವೆ. ಈ ಪ್ರಯತ್ನ ೧೯೨೧ರಿಂದಲೂ ನಡೆಯುತ್ತ ಬಂದಿದೆ. ಆಗ ಗ್ರಾಮ ಪಂಚಾಯಿತಿಗಳು ಬ್ರಿಟಿಷ್ ಸರ್ಕಾರದ ಯಂತ್ರಗಳಾಗಿ ಕೆಲಸ ಮಾಡುತ್ತಿದ್ದವು. ಗ್ರಾಮಗಳಲ್ಲಿ ಯಾವುದೇ ಪ್ರಕಾರದ ಹೊಸ ಯೋಜನೆಯನ್ನು ರೂಪಿಸಲು ಅವುಗಳಿಗೆ ಅವಕಾಶವಿರಲಿಲ್ಲ. ಅವು ಕೇವಲ ಕಂದಾಯ ವಸೂಲಿಯ ಸಾಧನಗಳಾಗಿದ್ದವು; ವಿದೇಶಿ ಸರ್ಕಾರದ ಅಡಿಯಾಳು ಸಂಸ್ಥೆಗಳಾಗಿದ್ದವು. ಅವು ಯಾವೊಂದು ಕ್ಷೇತ್ರಗಳಲ್ಲೂ ಸ್ವತಂತ್ರವಾದ ನಿಲುವನ್ನು ತಳೆಯಲು ಸಾಧ್ಯವಿರಲಿಲ್ಲ. ಸ್ವಾತಂತ್ರ್ಯಪೂರ್ವದ ಗ್ರಾಮ ಪಂಚಾಯಿತಿಗಳ ಈ ನಿಸ್ಸಹಾಯಕತೆಗೆ ಪ್ರಮುಖವಾದ ಕಾರಣ ಅವು ರಾಜಕೀಯವಾಗಿ, ಆರ್ಥಿಕವಾಗಿ ಸ್ವಾತಂತ್ರ್ಯ ಹೊಂದದೇ ಇದ್ದುದು. ಈ ಕಾರಣದಿಂದಾಗಿ ಭಾರತದ ಗ್ರಾಮಗಳು ನೂರಾರು ವರ್ಷಗಳಿಂದ ಯಾವುದೇ ಹೊಸಬಗೆಯ ಚಿಂತನೆಯನ್ನು ಮಾಡಲು ಸಾಧ್ಯವಾಗಲಿಲ್ಲ; ಹೊಸಬಗೆಯ ಸಮಾಜ ನಿರ್ಮಾಣದ ಮಾತಂತೂ ದೂರವೇ ಉಳಿಯಿತು. ಹಾಗಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳ ಮೇಲಾದರೂ ಭಾರತದ ಇಂದಿನ ಗ್ರಾಮಗಳು ಅದೇ ಪ್ರಾಚೀನತಮ ಗ್ರಾಮಗಳಂತೆಯೇ ಇವೆ. ಅದೇ ಮಾನಸಿಕ ಆಲಸ್ಯ, ಅದೇ ಜಾತಿ ಸಂಘರ್ಷ, ಅದೇ ಮದ್ಯಪಾನ ಚಟ, ಅದೇ ವ್ಯಾಜ್ಯಗಳ ಗೂಡು, ಅದೇ ಪರಾವಲಂಬನೆ.

ಸ್ವಾತಂತ್ರ್ಯ ಬಂದನಂತರ ಗ್ರಾಮಗಳ ಈ ದುಃಸ್ಥಿತಿಯನ್ನು ಪರಿವರ್ತಿಸಲು ಪ್ರಯತ್ನಗಳೇನೋ ನಡೆದಿವೆ. ಗ್ರಾಮಗಳ ಸ್ಥಿತಿಯ ಸುಧಾರಣೆಗಾಗಿ ಸರ್ಕಾರವು ಏಕಕಾಲಕ್ಕೆ ಗ್ರಾಮಗಳ ಶೈಕ್ಷಣಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ರಂಗಗಳಲ್ಲಿ ಸುಧಾರಣೆಗಳನ್ನು ತರಲು ಮುಂದಾಯಿತು. ಈ ಎಲ್ಲ ಸಮಸ್ಯೆ ಬೃಹದಾಕಾರದವೂ, ಆಳವಾಗಿ ಬೇರುಬಿಟ್ಟಂಥವೂ ಆಗಿದ್ದುದರಿಂದ ಹಾಗೂ ಈ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯವಾದ ಒಗ್ಗಟ್ಟು, ಸಾಮಾಜಿಕ ಇಚ್ಛಾಶಕ್ತಿ ಮತ್ತು ಮರುರಚನೆ ಯಾವ ರೀತಿ ಇರಬೇಕೆಂಬುದರ ಕಲ್ಪನೆ ಇತ್ಯಾದಿ ಮೂಲ ಗುಣಗಳಾಗಲೀ, ಸಾಮರ್ಥ್ಯವಾಗಲೀ ಗ್ರಾಮಸ್ಥರಲ್ಲಿ ಇರಲಿಲ್ಲವಾದ್ದರಿಂದ ಭಾರತದ ಸ್ವತಂತ್ರ ಸರ್ಕಾರ ದಿಗ್ಭ್ರಮೆಗೆ ಒಳಗಾಯಿತು. ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಯಾವ ರೀತಿ ಮುಂದುವರಿಯಬೇಕೆಂದು ನಾಯಕರಿಗೆ ಗೊತ್ತಾಗಲಿಲ್ಲ. ಕೊನೆಯಲ್ಲಿ ಅವರಿಗೆ ಹೊಳೆದುದು ಗ್ರಾಮ-ಗ್ರಾಮಗಳಲ್ಲಿ ಪಂಚಾಯಿತಿಗಳ ರಚನೆ, ಅವುಗಳಿಗೆ ಚುನಾವಣೆ, ಮತ್ತು ಗ್ರಾಮೀಣಾಭಿವೃದ್ಧಿಗಾಗಿ ಪಂಚಾಯಿತಿಗಳಿಗೆ ಹೇರಳವಾದ ಧನಸಹಾಯ

ಕೊಡುವುದು ಇತ್ಯಾದಿ ಕಾರ್ಯಕ್ರಮಗಳು. ಈ ಉಪಾಯಗಳು ಗ್ರಾಮಗಳನ್ನು ಹೊಸ ದಿಕ್ಕಿನತ್ತ, ಹೊಸ ವ್ಯವಸ್ಥೆಯತ್ತ, ಹೊಸ ಚಿಂತನೆಯತ್ತ ಕೊಂಡೊಯ್ಯುವುವೆಂಬ ನಿರೀಕ್ಷಣೆಯಲ್ಲಿ ನಾಯಕರು ತಮ್ಮ ಸಮಯವನ್ನು ಕಳೆದರು. ಆದರೆ ಅವರ ನಿರೀಕ್ಷೆಯಂತೆ ಗ್ರಾಮಗಳಲ್ಲಿ ಯಾವ ಸಾಮಾಜಿಕ ಬದಲಾವಣೆಯೂ ಅಗಲಿಲ್ಲ. ಅಷ್ಟೇ ಅಲ್ಲ ಗ್ರಾಮಸ್ಥರ ಮನೋಭಾವದಲ್ಲಿಯಾಗಲೀ, ವಿಚಾರದಲ್ಲಿಯಾಗಲೀ ಯಾವ ಬದಲಾವಣೆಯೂ ಆಗಲಿಲ್ಲ. ಏಕೆಂದರೆ ಗ್ರಾಮಗಳ ಅಭಿವೃದ್ಧಿಗಾಗಿ ನಾಯಕರು ಆಯ್ಕೆ ಮಾಡಿಕೊಂಡಿದ್ದಂಥ ಉಪಾಯಗಳು ಸ್ವಭಾವಜನ್ಯ ಲೋಪದೋಷಗಳಿಂದಾಗಿ ಗ್ರಾಮಾಭಿವೃದ್ಧಿಗೆ ಪೂರಕವಾಗುವುದರ ಬದಲು ಮಾರಕವೇ ಆದವು. ಆದ್ದರಿಂದ ಗ್ರಾಮಾಭಿವೃದ್ಧಿ ಪ್ರಾರಂಭವಾಗುವ ಮುನ್ನ, ಗ್ರಾಮ ಪಂಚಾಯಿತಿಗಳ ಸ್ಥಾಪನೆಗೆ ಮುನ್ನ ಗ್ರಾಮಗಳ ಜೀವನಸ್ಥಿತಿ, ಗ್ರಾಮೀಣಜನರ ಮನೋಸ್ಥಿತಿ, ವಿಚಾರಗತಿ ಹೇಗೆ ಇದ್ದವೋ ಅದೇ ಪ್ರಕಾರದ ಸ್ಥಿತಿಗಳು ೨೦೦೫ರ ಗ್ರಾಮ ಪಂಚಾಯಿತಿಗಳ ಚುನಾವಣೆಯ ನಂತರವೂ ಇದೆ. ಪಂಚಾಯಿತಿಗಳ ಸದಸ್ಯರ ಚುನಾವಣೆಯ ಕಾಲದಲ್ಲಿ ಹಾಗೂ ತದನಂತರದ ಅಧ್ಯಕ್ಷರ ಚುನಾವಣೆಯ ಕಾಲದಲ್ಲಿ ನಡೆದ ನಿಯಮಬಾಹಿರ ನಡವಳಿಕೆಗಳನ್ನು ನೋಡಿದರೆ ಗ್ರಾಮಾಭಿವೃದ್ಧಿಗಾಗಿ ಆಯ್ಕೆ ಮಾಡಿಕೊಂಡಿದ್ದ ಮಾಧ್ಯಮಗಳು ಎಷ್ಟು ದೋಷಪೂರ್ಣವಾಗಿದ್ದವೆಂಬುದು ಸ್ಪಷ್ಟವಾಗಿ ತೋರಿಸುತ್ತವೆ.

ಸ್ವಾತಂತ್ರ್ಯ ಬಂದಮೇಲೆ ಗ್ರಾಮ ಪಂಚಾಯಿತಿಗಳ ಸ್ವರೂಪ ಅಮೂಲಾಗ್ರವಾಗಿ ಬದಲಾಗಬೇಕಿತ್ತು. ಕೇವಲ ಭೂಕಂದಾಯ ವಸೂಲಾತಿಯ ಸಾಧನಗಳಾಗಿರದೆ ಸ್ವತಂತ್ರಭಾರತದ ಗಣರಾಜ್ಯದ ಸತ್ವಗಳನ್ನು ಅಳವಡಿಸಿಕೊಂಡು ಗ್ರಾಮಗಳು ಸಹ ಪುಟ್ಟ ಪುಟ್ಟ ಗಣರಾಜ್ಯಗಳ ಜಾಲವಾಗಿ ದೇಶದ ತುಂಬ ಹಬ್ಬಿ ಬೃಹತ್ ಭಾರತದ ಗಣರಾಜ್ಯವನ್ನು ಬಲಗೊಳಿಸಬೇಕಿತ್ತು. ತಮ್ಮದೇ ಆದ ಪ್ರಜಾತಂತ್ರ ವ್ಯವಸ್ಥೆಯನ್ನು ರೂಪಿಸಿಕೊಂಡು ಭಾರತದ ಪ್ರಜಾತಂತ್ರವನ್ನು ಬಲಿಷ್ಠಗೊಳಿಸಬೇಕಿತ್ತು. ಆದರೆ ೫೦ವರ್ಷಗಳಿಂದೀಚೆಗಿನ ಗ್ರಾಮ ಪಂಚಾಯಿತಿಗಳ ಬೆಳವಣಿಗೆಗಳನ್ನು ನೋಡಿದರೆ ನಮಗೆ ಅತೀವ ದುಃಖವಾಗುತ್ತದೆ. ದೇಶದ ರಾಜಧಾನಿಯಾದ ದೆಹಲಿ ಹೇಗೆ ಕುಣಿಯುತ್ತದೋ ಅದೇ ರೀತಿ ದೇಶದ ಆಧಾರಸ್ತಂಭಗಳಾದ ಹಳ್ಳಿಗಳು ಕುಣಿಯುತ್ತವೆ. ಅಂದರೆ ಸ್ವಾತಂತ್ರ್ಯ ಬರುವ ಮುನ್ನ ಇದ್ದ ಸ್ಥಿತಿಗೂ, ಸ್ವಾತಂತ್ರ್ಯಾನಂತರದ ಸ್ಥಿತಿಗೂ ಯಾವುದೇ ವ್ಯತ್ಯಾಸವಿಲ್ಲವೆಂದೆನಿಸುತ್ತದೆ. ಸ್ವಾತಂತ್ರ್ಯಕ್ಕೆ ಮುನ್ನ ಭಾರತದ ದೆಹಲಿ ಇಂಗ್ಲೆಂಡಿನ ಲಂಡನ್ ಹೇಳಿದಂತೆ ಕುಣಿಯುತ್ತಿತ್ತು. ಈಗ ಸ್ವಾತಂತ್ರ್ಯ ಬಂದಮೇಲೆ ದೆಹಲಿ ಹೇಳಿದಂತೆ ಹಳ್ಳಿಗಳು ಕುಣಿಯುತ್ತಿವೆಯಷ್ಟೆ. ಈಗ ದೆಹಲಿ ಮತ್ತು ಹಳ್ಳಿಗಳ ಸಂಬಂಧ ಎಷ್ಟು ಗಾಢವಾಗಿದೆಯೆಂದರೆ ದೆಹಲಿ ಬಹು ರಾಷ್ಟ್ರೀಯ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡರೆ, ವಿಶ್ವ ಬ್ಯಾಂಕಿನ ಸೂಚನೆಗಳನ್ನು ಒಪ್ಪಿಕೊಂಡರೆ ಭಾರತದ ಏಳು ಲಕ್ಷ ಗ್ರಾಮಗಳಲ್ಲಿಯ ೮೦ಕೋಟಿ

ಜನರೂ ಆ ಒಪ್ಪಂದಗಳನ್ನು, ಸೂಚನೆಗಳನ್ನೂ ಮರುಮಾತಿಲ್ಲದೆ, ಮರುಯೋಚನೆಯಿಲ್ಲದೆ ಒಪ್ಪಿಕೊಳ್ಳಬೇಕಾಗಿದೆ. ಇಷ್ಟು ದುರ್ಬಲವಾಗಿವೆ ನಮ್ಮ ಇಂದಿನ ಗ್ರಾಮ ಪಂಚಾಯಿತಿಗಳು. ಆದರೆ ಸ್ವತಂತ್ರ ಭಾರತದಲ್ಲಿ ನಿಜವಾಗಿಯೂ ಆಗಬೇಕಾಗಿದ್ದುದೇನೆಂದರೆ ದೇಶದ ಪಂಚಾಯಿತಿಗಳ ಮಹಾನ್ ಒಕ್ಕೂಟ ಸೂಚಿಸುವ ಮೇರೆಗೆ ದೆಹಲಿ ಬಹುರಾಷ್ಟ್ರೀಯ ಕಂಪನಿಗಳೊಂದಿಗೂ, ವಿಶ್ವಬ್ಯಾಂಕಿನೊಂದಿಗೂ ಒಪ್ಪಂದ ಮಾಡಿಕೊಳ್ಳಬೇಕಿತ್ತು. ಇಂಥ ಅದ್ಭುತವಾದ ಪರಿಸ್ಥಿತಿಯೇನಾದರೂ ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಿಂದಲೇ ನಿರ್ಮಾಣವಾಗುತ್ತಾ ಹೋಗಿದ್ದರೆ ಭಾರತ ತನ್ನ ಆರ್ಥಿಕ- ಸಾಮಾಜಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಗಿರಲಿಲ್ಲ. ಹೊಸ ಪ್ರಕಾರದ ಪಾರತಂತ್ರ್ಯವನ್ನು ಅನುಭವಿಸಬೇಕಾಗಿರಲಿಲ್ಲ.

ಆದರೆ ಈಗ ಆಗಿರುವುದೇನೆಂದರೆ ಭಾರತವು ಹಿಂದುಳಿದ ದೇಶ, ಅಭಿವೃದ್ಧಿಶೀಲ ರಾಷ್ಟ್ರ ಮುಂತಾದ ಹಣೆಪಟ್ಟಿಯನ್ನು ಬರೆದುಕೊಂಡೋ, ಅಥವಾ ಬರೆಯಿಸಿಕೊಂಡೋ ಪ್ರಪಂಚಾದ್ಯಂತ ಡಾಲರ್‌ಗಳ ಭಿಕ್ಷಾಟನೆಗಾಗಿ ಹೊರಟಿರುವುದು. ಅಭಿವೃದ್ಧಿ ಹೊಂದಬೇಕೆಂಬ ಭರಾಟೆಯಲ್ಲಿ ನಿಜವಾದ ಶಕ್ತಿಯಮೂಲಗಳಾದ ಗ್ರಾಮ ಪಂಚಾಯಿತಿಗಳನ್ನು ಕೇಂದ್ರಸರ್ಕಾರ ತನ್ನ ಸೆರೆಯಾಳುಗಳನ್ನಾಗಿ ಮಾಡಿಕೊಂಡಿರುವುದು.

ಇಂಗ್ಲೀಷರ ಆಳ್ವಿಕೆಯ ಕಾಲದಲ್ಲಿ ಅವರ ಅಧಿಕಾರದ ಸೆರೆಯಾಳುಗಳಾಗಿದ್ದ ಪಂಚಾಯಿತಿಗಳು ಇಂದು ಕೆಂದ್ರ ಸರ್ಕಾರ ಹಾಗೂ ರಾಜ್ಯಸರ್ಕಾರಗಳು ಅಭವೃದ್ಧಿಯ ಹೆಸರಿನಲ್ಲಿ ಕೊಡಮಾಡುವ ಆರ್ಥಿಕ ಅನುದಾನಗಳ ಸೆರೆಯಾಳುಗಳಾಗಿವೆ. ಈ ಅನುದಾನಗಳ ಬೆಂಬೆತ್ತಿಯೇ ಬರುವ ರಾಜಕೀಯ ಪಕ್ಷಗಳ ಸೆರೆಯಾಳುಗಳೂ ಆಗಿವೆ. ಹೀಗೆ ಗ್ರಾಮ ಪಂಚಾಯಿತಿಗಳು ಏಕ ಕಾಲಕ್ಕೆ ಆರ್ಥಿಕ ಮತ್ತು ರಾಜಕೀಯ ಸೆರೆಯಾಳುಗಳಾಗಿವೆ. ಇದು ಸ್ವತಂತ್ರ ಭಾರತದ ಗ್ರಾಮಪಂಚಾಯಿತಿಗಳ ಹೊಸಬಗೆಯ ದಾಸ್ಯವಾಗಿದೆ.

ಈಗ ಅಸ್ತಿತ್ವಕ್ಕೆ ಬಂದ ಹೊಸ ಗ್ರಾಮ ಪಂಚಾಯಿತಿಗಳು ಕಾನೂನು ದೃಷ್ಟಿಯಿಂದ ಹೊಸ ಪಂಚಾಯಿತಿಗಳಾಗಿವೆಯೇ ಹೊರತು ಅವುಗಳಲ್ಲಿಯ ತಿರುಳು ಮಾತ್ರ ಹಳಸಲಾಗಿಯೇ ಇದೆ. ರಾಷ್ಟ್ರಮಟ್ಟದಲ್ಲಿ ವ್ಯಾಪಕವಾಗಿರುವ ಅದೇ ಕೀಳು ರಾಜಕೀಯ ಗ್ರಾಮಪಂಚಾಯಿತಿಗಳಲ್ಲಿಯೂ ಇದೆ. ಲೋಕ ಸಭೆಯಲ್ಲಿ ನಡೆಯುವ ಅದೇ ಕೀಳುಮಟ್ಟದ, ಸ್ವಾರ್ಥಪರವಾದ ಚರ್ಚೆ, ಗಲಾಟೆ ಇತ್ಯಾದಿಗಳು ಗ್ರಾಮ ಸಭೆಗಳಲ್ಲೂ, ಜಿಲ್ಲಾ ಪಂಚಾಯತ್‌ಗಳಲ್ಲಿಯೂ ನಡೆಯುತ್ತಿವೆ. ಗ್ರಾಮ ಪಂಚಾಯತಿಗಳ ಹಂತದಲ್ಲಿ ರಾಜಕೀಯ ಪಕ್ಷಗಳು ಪ್ರವೇಶ ಮಾಡಕೂಡದೆಂದು ಹೇಳಲಾಗುತ್ತಿದೆಯಾದರೂ ರಾಜಕೀಯ ಪಕ್ಷಗಳ ಕೈವಾಡ ಪರೋಕ್ಷವಾಗಿ ಇದ್ದೇ ಇದೆ. ಇತ್ತೀಚೆಗಿನ ಗ್ರಾಮ ಪಂಚಾಯಿತಿಗಳ ಸದಸ್ಯರ ಚುನಾವಣೆಯಲ್ಲೂ ರಾಜ್ಯ ಹಾಗೂ ರಾಷ್ಟ್ರಮಟ್ಟದ ರಾಜಕೀಯ ಪಕ್ಷಗಳು ತಮ್ಮ ಬಲಾಬಲವನ್ನು ಪರೀಕ್ಷಿಸುವ

ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದು ಸ್ಪಷ್ಟವಾಗಿಯೇ ಇದೆ. ಹಾಗೆಯೇ ಜಾತೀಯತೆ ಮತ್ತು ಹಣದ ಬಳಕೆಯಾದುದೂ ಸ್ಪಷ್ಟವಾಗಿದೆ.

ರಾಜಕೀಯ ಪಕ್ಷಗಳ ಕೈವಾಡವಿಲ್ಲದೆ, ಹಣದ ಹೊಳೆ ಹರಿಸದೆ ಗ್ರಾಮ ಪಂಚಾಯಿತಿಗಳು ಕೆಲಸ ಮಾಡಲಾರವೆಂಬುದು ಒಂದು ರಾಷ್ಟ್ರೀಯ ನೀತಿಯೇ ಆಗಿದೆ. ಆದ್ದರಿಂದ ಪ್ರತಿ ನಾಲ್ಕು ಅಥವಾ ಐದು ವರ್ಷಗಳಿಗೊಮ್ಮೆ ನಡೆಯುವ ಗ್ರಾಮ ಪಂಚಾಯತ್ ಚುನಾವಣೆಗಳು ಕೇವಲ ಯಂತ್ರವತ್ತಾಗಿ ತಿರುಗುವ ಚಕ್ರಗಳಾಗಿವೆಯೇ ಹೊರತು ಗ್ರಾಮೀಣ ಜೀವನದಲ್ಲಿ ಹೊಸ ಚೈತನ್ಯ ತರುವಂಥ, ಹೊಸ ಪರಾಕ್ರಮುವನ್ನುಂಟುಮಾಡುವಂಥ, ಮಾನವೀಯಗುಣಗಳನ್ನು ಪ್ರತಿಷ್ಠಾಪಿಸುವಂಥ ಸಾಧನಗಳಾಗಿಲ್ಲ.

ಎಲ್ಲಿಯವರೆಗೆ ನಮ್ಮ ರಾಷ್ಟ್ರಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ರಾಷ್ಟ್ರಪಿತ ಮಹಾತ್ಮಾ ಗಾಂಧೀ, ಆಚಾರ್ಯ ವಿನೋಬಾ ಭಾವೆ, ಲೋಕನಾಯಕ ಜಯಪ್ರಕಾಶ ನಾರಾಯಣರು ಗ್ರಾಮ ಪಂಚಾಯತ್‌ಗಳ ಬಗ್ಗೆ ಮಂಡಿಸಿರುವ ವಿಚಾರಗಳನ್ನು, ಆದರ್ಶಗಳನ್ನು ಒಪ್ಪಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಗ್ರಾಮ ಪಂಚಾಯತ್‌ಗಳ ಬಗ್ಗೆ ಸರ್ಕಾರ ಯಾವುದೇ ಪ್ರಕಾರದ ಕಾರ್ಯಕ್ರಮಗಳನ್ನು, ಕಾನೂನು ಕಟ್ಟಳೆಗಳನ್ನು ಅನುಸರಿಸಲಿ ಅವೆಲ್ಲವೂ ನೀರಮೇಲೆ ಗೆರೆ ಎಳೆದಂತೆ ನಿರರ್ಥಕವೆಂದೇ ಸಿದ್ಧವಾಗುವವು.

ಈಗ ತಾನೇ ಪುನಾರಚನೆಗೊಂಡ ಪಂಚಾಯತ್‌ಗಳು ಹೊಸಬಗೆಯ ಪಂಚಾಯತ್‌ಗಳೆನಿಸಿಕೊಳ್ಳಲು ಸಾಧ್ಯವೇ ಇಲ್ಲ; ಸರ್ಕಾರವೆಂಬ ತಂತ್ರ, ಅನುದಾನವೆಂಬ ಶಾಪದಿಂದ ಬಿಡುಗಡೆಹೊಂದಿವೆಯೆಂದೂ ಹೇಳಲು ಸಾಧ್ಯ ಇಲ್ಲ. ಈಗ ರಚನೆಗೊಂಡಿರುವ ಪಂಚಾಯತಗಳು ಹೊಸದೂ ಅಲ್ಲ, ಸ್ವತಂತ್ರವೂ ಅಲ್ಲ.

ಗಳಿಗೆ ಗಳಿಗೆಗೂ ಹೊಸ ರೀತಿಗೆ
ಈ ಜಗವೋಡುತಿದೆ–
ಪ್ರಗತಿಯ ಹಂತಕೊ
ಪ್ರಲಯ ದುರಂತಕೊ
ಹಳತ ನೋಡಿ ತಾ ಕಿಲ ಕಿಲ ನಗುತಲಿ
ಓ ಜಗವೋಡುತಿದೆ.

–ಪು. ತಿ. ನ.

****

ಕತ್ತರಿ ಪ್ರಯೋಗ

-ಕನ್ಹಯ್ಯಾಲಾಲ್ ಮಿಶ್ರ

ಇಂದು ಮುಖಮಾರ್ಜನೆ ಮುಗಿಸಿ ಮುಖಕ್ಷೌರಕ್ಕೆಂದು ಕುಳಿತಾಗ ಕನ್ನಡಿಯಲ್ಲಿ ಬೊಕ್ಕತಲೆಯ ಮಧ್ಯ ಇರುವ ೧೦-೧೫ ಕೂದಲುಗಳಲ್ಲಿ ಒಂದು ಬಿಳಿಗೂದಲು ತೂಗಾಡುತ್ತಿರುವುದು ತೋರಿತು. ಯಾವುದೋ ಒಂದು ಮಹತ್ವಪೂರ್ಣ ಘೋಷಣೆಗಾಗಿ ಎದ್ದುನಿಂತಿರುವ ಅದನ್ನು ಕಂಡು, ಅದರ ಉದ್ಧಟತನಕ್ಕಾಗಿ ನಾನು ಸಿಟ್ಟಾಗಿ ಕತ್ತರಿಯ ಒಂದೇ ಹೊಡೆತಕ್ಕೆ ಅದನ್ನು ಕಿತ್ತುಹಾಕಿದೆ. ಅದನ್ನು ಸಮೂಲವಾಗಿ ಕಿತ್ತೆಸೆಯುವುದು ನನ್ನಿಂದ ಅಸಾಧ್ಯವಾದರೂ ಅದನ್ನು ಅದೃಶ್ಯಗೊಳಿಸಿದೆನೆಂಬ ಸಮಾಧಾನ ನನಗಾಯಿತು. ನಾನು ಮರಳಿ ಕನ್ನಡಿಯಲ್ಲಿ ನೋಡಿದೆ. ಅದರ ಸುಳಿವೇ ಇರಲಿಲ್ಲ. ಮನಸ್ಸಿಗೆ ಸ್ವಲ್ಪ ತೃಪ್ತಿಯಾಯಿತು. ಆದರೆ ಆಗಲೇ ಜೋರಾಗಿ ನಗುವೂ ಬಂತು. ದಮನ ಚಕ್ರವನ್ನುಪಯೋಗಿಸಿ ದಂಗೆಯನ್ನಡಗಿಸಿದೆನೆಂದು ಆತ್ಮತೃಪ್ತಿ ತಳೆಯುವ ನಿರಂಕುಶಾಧಿಕಾರಿಯಂತೆಯೇ ನನ್ನ ಸ್ಥಿತಿಯೂ ತಿಳಿಗೇಡಿತನದ್ದೆಂದು ಅರಿವಾಯಿತು. ಆ ಬಿಳಿಗೂದಲು ತಲೆಬುರುಡೆಯೊಳಗೆ ಕುಳಿತು ಅಭಿಮಾನದಿಂದ-' ಅಯ್ಯಾ! ಕತ್ತರಿಪ್ರಯೋಗದಿಂದ ನನ್ನನ್ನು ಹತ್ತಿಕ್ಕಲು ಸಾಧ್ಯವೆ? ಬರುವ ವಾರ ನೋಡಿರಿ. ಇಲ್ಲೇ ನನ್ನ ಝುಂಡಾ ಊರಿಬಿಡುತ್ತೇನೆ'- ಎಂದು ಅಣಕಿಸುವಂತೆ ಭಾಸವಾಯಿತು.

ಆಗಲೇ ನನ್ನ ಮನದಲ್ಲೊಂದು ಪ್ರಶ್ನೆಯೆದ್ದಿತು. ತಲೆಯ ಮೇಲೆ ಸಾವಿರಾರುಕೂದಲುಗಳಿರುವುದು ನಮಗೆ ಕೆಡುಕೆನಿಸದ ಮೇಲೆ ಒಂದು ಬಿಳಿಗೂದಲು ಅದೇಕೆ ಮಹಾಹೊರೆಯಾಯಿತು? ಅದು ಅಲ್ಲಿ ನಿಂತಿದ್ದರೆ ನಿನಗೇನು ನಷ್ಟವಾಗುತ್ತಿತ್ತು?

ಪ್ರಶ್ನೆಯೆದ್ದ ಬಳಿಕ ಅದಕ್ಕೊಂದು ಸಮಾಧಾನ ಬೇಕೇಬೇಕು. ಇಲ್ಲದಿದ್ದರೆ ಮುಳ್ಳಿನಂತೆ ಅದು ಚುಚ್ಚುತ್ತಲೇ ಇರುತ್ತದೆ. ಪ್ರಶ್ನೆ ಎದುರಾದಾಗ ನಾನು ಸ್ವತಃ ನನ್ನಲ್ಲೇ ಅದಕ್ಕೆ ಉತ್ತರ ಹುಡುಕಬಯಸುತ್ತೇನೆ. ಕೆಲವೊಮ್ಮೆ ಒಂದೊಂದು ಪ್ರಶ್ನೆಯ ಉತ್ತರ ಪಡೆಯಲು ನಾಲ್ಕಾರು ವರ್ಷ ತಗಲುವುದುಂಟು. ಕೆಲವೊಮ್ಮೆ ಕೂಡಲೆ ಉತ್ತರ ಹೊಳೆಯುವುದೂ ಇದೆ.

ನಾನೇನೂ ವಿದ್ವಾಂಸನೇನಲ್ಲ..... ಜೀವನಪಥದ ಜಾಗರೂಕ ಯಾತ್ರಿಕನಷ್ಟೇ. ಆದ್ದರಿಂದ ನನ್ನ ಪ್ರಶ್ನೆಗಳು ತತ್ವಜ್ಞಾನಕ್ಕೆ ಸಂಬಂಧಿಸಿದ್ದು ಗಹನ ಜಿಜ್ಞಾಸೆಯನ್ನುಂಟುಮಾಡುವುದಿಲ್ಲ. ಅದಕ್ಕೆ ಬದಲು ಜೀವನದ ಸಾಧಾರಣ ಏರಿಳಿತಗಳಿಗಷ್ಟೇ ಅವು ಸಂಬಂಧಿಸಿರುತ್ತವೆ. ಹೀಗಾಗಿ ನನ್ನ ಪ್ರಶ್ನೆಗೂ ಜೀವನದಲ್ಲೇ ಉತ್ತರ ದೊರೆಯಬೇಕಾದುದು ಅಗತ್ಯ.

ತಲೆಯಲ್ಲಿ ಸಾವಿರಾರು ಕರಿಗೂದಲುಗಳಿರುವುದು ನಮಗೆ ಸಂತೋಷದಾಯಕವೇ ಆಗಿರುವಾಗ ಅವುಗಳ ನಡುವೆಯಿರುವ ಒಂದೇಒಂದು ಬಿಳಿಗೂದಲು ಅದೇಕೆ ಅಪ್ರಿಯವಾಗಬೇಕು?- ಇದೊಂದು ಸ್ವಾಭಾವಿಕ ಪ್ರಶ್ನೆಯೇ.

ಈ ಪ್ರಶ್ನೆಗೆ ಉತ್ತರ ಹುಡುಕಲೆಂದು ಯೋಚಿಸುವಾಗಲೇ ಗೆಳೆಯ ಶರ್ಮಾ ನೆನಪಾದರು. ಮುಖಕ್ಷೌರವನ್ನೇನೋ ಮೂರೇ ನಿಮಿಷದಲ್ಲಿ ಅವರು ಮುಗಿಸಿಬಿಡುತ್ತಾರೆ. ಆದರೆ ಮೀಸೆ ಸರಿಪಡಿಸಿಕೊಳ್ಳಲು ೬ ನಿಮಿಷ ತಗಲುತ್ತದೆ..... ಮೂಗಿನ ಕೆಳಗೆ ದಟ್ಟವಾದ ಕರಿ ಮೀಸೆಯ ಹೊರೆಯಲ್ಲಿ ೧೦-೧೫ ಬಿಲಿಗೂದಲು ಎದ್ದು ಬಂದಿವೆ. ಅವರವನ್ನು ತಮ್ಮ ಸಣ್ಣ ಕತ್ತರಿಯಿಂದ ಕತ್ತರಿಸುತ್ತಾರೆ. ತಮ್ಮ ಬಿಳಿಗೂದಲುಗಳು ಬೇರಾರಿಗೂ ಕಾಣಿಸಬಾರದೆಂದು ಅವರಿಚ್ಛೆ. ಅಲ್ಲದೆ ಅವನ್ನು ಆ ಸ್ಥಳದಿಂದ ಕತ್ತರಿಸಿದುದೂ ಇತರರ ದೃಷ್ಟಿಗೆ ಗೋಚರಿಸಬಾರದೆಂದು ಅವರ ಅಪೇಕ್ಷೆ.... ಅರ್ಥಾತ್ ಆ ಬಿಳಿಗೂದಲು ತಮಗೆ ಸಂಬಂಧಿಸಿರುವುದೂ ಅಪಮಾನಕರವೆಂದು ಅವರ ಅಭಿಪ್ರಾಯ.

ಪುನಃ ಅದೇ ಪ್ರಶ್ನೆ... ಜನ ಬಿಳಿಗೂದಲು ಕಂಡು ಅದೇಕೆ ಇಷ್ಟೊಂದು ರೇಗಾಡುತ್ತಾರೆ? ಪ್ರಶ್ನೆ ನನ್ನ ಒಳಮನದಲ್ಲೇ ಸುತ್ತುಹಾಕುತ್ತಾ ಇದೆ...ತಿರುಗುತ್ತಾ ತಿರುಗುತ್ತಾ ಅದು ವಾಸುದೇವನ ತಾಯಿಯ ಮನೆಗೆ ತಲುಪಿತು... ಅವಳ ಪ್ರಾಯ ೪೦ ವರ್ಷ... ಎಲ್ಲ ರೀತಿಯಿಂದಲೂ ಸುಖಿಯೇ...ಸಧವೆ; ಮಗ, ಸೊಸೆ- ಎಲ್ಲರೂ ಇದ್ದಾರೆ... ರೋಗರುಜಿನಗಳೇನೂ ಇಲ್ಲ...ಅಂದು ವಾಸುದೇವನನ್ನು ಕರೆಯಲು ಹೋದಾಗ ತಾಯಿ ಬಿಸಿಲಲ್ಲಿ ಕುಳಿತು ಸೊಸೆಯಿಂದ ಬಿಳಿಗೂದಲು ತೆಗೆಯಿಸುತ್ತಿದ್ದಳು. ಓ! ಈಕೆಗೂ ಬಿಳಿಗೂದಲು ಕಂಡರಾಗದು?

ಈ ತಿರಸ್ಕಾರಕ್ಕೆ ಕಾರಣ ಇದ್ದೇ ಇದೆ.... ಇಡೀ ತಲೆಯೇ ಕಪ್ಪಾಗಿದ್ದು ನಡುವೆ ನಾಲ್ಕಾರು ಬಿಳಿಗೂದಲು ಕಾಣಿಸಿಕೊಂಡರೆ ಬಿಳಿಯಂಗಿಯ ನಡುವೆ ಕೆಂಪು ಶಾಯಿಯ ಕಲೆಯಂತೆ ವಿಕಾರವೆನಿಸದೆ ? ಬಿಳಿಗೂದಲ ಬಗ್ಗೆ ನಮ್ಮಲ್ಲಿ

ಮೂಡುವ ಈ ತಿರಸ್ಕಾರ ನಮ್ಮ ಸೌಂದರ್ಯಬೋಧದ ಹೆಗ್ಗುರುತು. ನಾನು ನನ್ನ ಬೊಕ್ಕ ತಲೆಯಲ್ಲಿದ್ದ ಬಿಳಿಗೂದಲನ್ನು ಕತ್ತರಿಸಿ ಬಿಸಾಡಿದುದು ಈ ಸೌಂದರ್ಯಬೋಧದ ರುಜುವಾತು ಎಂದು ಮನದಲ್ಲೇ ತೃಪ್ತನಾದೆ.

ಮನುಷ್ಯನೂ ಅದೆಷ್ಟು ಚತುರ! ಇತರರನ್ನು ವಂಚಿಸುವುದಂತೂ ಇದ್ದೇ ಇದೆಯಷ್ಟೆ....ತನ್ನನ್ನೂ ಬಿಟ್ಟುಬಿಡುವುದಿಲ್ಲ! ನಾನೂ ನನ್ನನ್ನು ಸೌಂದರ್ಯಬೋಧದ ಪಂಡಿತನೆಂದು ಭಾವಿಸಿಕೊಂಡೆ. ಆದರೆ ಈ ತಿಳಿವು ಸ್ಥಾಯಿಯಾಗಲಿಲ್ಲ. ಏಕೆಂದರೆ ಆಗಲೇ ಮಿತ್ರ ಚೌಧರಿಯವರು ನೆನಪಾದರು. ಪ್ರಖ್ಯಾತ ಪುರುಷರು... ಸಮಾಜದಲ್ಲಿ ಒಳ್ಳೆ ಹೆಸರಿದೆ... ಸಾಕಷ್ಟು ಐಶ್ವರ್ಯವೂ ಇದೆ. ಇಳಿವಯಸ್ಸಾದರೂ ದೇಹದಲ್ಲಿ ಬಲವದೆ. ಮುಖದಲ್ಲಿ ಕಳೆಯಿದೆ....ಅವರ ತಲೆ ಕಪ್ಪೆಂದೇ ನನ್ನ ಭಾವನೆಯಿತ್ತು. ಆದರೆ ಅಂದು ಲಕ್ನೋಗೆ ನಾನು ಹೊರಟು ನಿಂತಾಗ, ‘ ಕೂದಲಿಗೆ ಹಚ್ಚುವ ಬಣ್ಣದ ಸೀಸೆಯೊಂದನ್ನು ಮರೆಯದೆ ತಾ ? ಅಮೀನಾಬಾದ್ ಪಾರ್ಕಿನಲ್ಲಿ ದೇವಸ್ಥಾನದ ಎದುರಿನ ದೊಡ್ಡ ಅಂಗಡಿಯಲ್ಲಿದೆ– ಇಗೋ ೫ ರೂಪಾಯಿ‘ ಎಂದರು.

‘ಬಣ್ಣದ ಸೀಸೆ ನಿಮಗೇಕೆ?‘–ನಾನು ಕೇಳಿದೆ.

‘ತಲೆ ಬೆಳ್ಳಗಾಗಿದೆ. ಹಚ್ಚಬೇಕಾಗಿದೆ‘ – ಎಂದರವರು.

ನನಗೆ ಪುನಃ ಸಮಸ್ಯೆ ಎದುರಾಯಿತು. ಬಿಳಿಗೂದಲಿನ ಬಗ್ಗೆ ನಮಗಿರುವ ತಿರಸ್ಕಾರ ಸೌಂದರ್ಯಬೋಧದ ಚಿಹ್ನೆಯಲ್ಲ.. ಏಕೆಂದರೆ ಹತ್ತೆಂಟು ಕೂದಲು ಬೆಳ್ಳಗಾದವರು ಮಾತ್ರ ಅವನ್ನು ಹೋಗಲಾಡಿಸಲು ಪ್ರಯತ್ನಿಸುವುದಲ್ಲ– ಅದರ ಬದಲು ಇಡೀ ತಲೆಯೇ ಬೆಳ್ಳಗಾದವರು ಕೂಡ ಅದನ್ನು ಮರೆಯಲು ಪ್ರಯತ್ನಿಸುತ್ತಾರೆ! ಅದಕ್ಕಾಗಿಯೇ ಬಣ್ಣ ಬಳಿಯುತ್ತಾರೆ!!

ಬಿಳಿಗೂದಲ ಬಗ್ಗೆ ಜನರಿಗಿರುವ ತಿರಸ್ಕಾರದ ಪರಮಾವಧಿ ‘ನೂರೂ ಸಾಹೇಬ‘ನಿಂದ ನನಗೆ ತಿಳಿಯಿತು. ನೂರೂ ನಮ್ಮ ಕೇರಿಯಲ್ಲೇ ಇದ್ದು ರಾತ್ರಿ ವೇಳೆ ಪೇಟೆಯ ಪಹರೆ ನಡೆಸುತ್ತಾನೆ. ಅಂದು ಮಧ್ಯಾಹ್ನ ಮನೆಯ ಹೊರಗೆ ಕುಳಿತಿದ್ದ. ನಾನು ಆ ಹಾದಿಯಾಗಿ ಸಾಗಿದಾಗ ಅವನು ತಲೆಗೆ ಯಾವುದೋ ಔಷಧ ಹಚ್ಚಿರುವುದೂ ಅದರ ಮೇಲೆ ಬಟ್ಟೆ ಕಟ್ಟಿರುವುದೂ ಕಾಣಿಸಿತು.

ನೋಡಿದೊಡನೆಯೇ ಎದೆ ಧಡಕ್ಕೆಂದಿತು. ರಾತ್ರಿಯೆಲ್ಲೋ ಕಳ್ಳರೊಡನೆ ಸೆಣೆಸಾಡಿ ತಲೆಯೊಡೆದಿದೆಯೆಂದು ಭಾವಿಸಿ– ‘ಏನು? ಎಲ್ಲಿ ಪೆಟ್ಟಾಯಿತು?‘– ಎಂದು ಕೇಳಿದೆ.

'ಪೆಟ್ಟು ? ತಲೆಗೆ ಮದರಂಗಿ ಹಚ್ಚಿದ್ದೇನೆ'- ಮುಗುಳ್ನಗುತ್ತಾ ಅವನೆಂದ.

'ತಲೆಗೆ ಮದರಂಗಿ !'

'ಹೌದು... ಬಣ್ಣದ ಸಾಧಾರಣ ಸೀಸೆಯೂ ೨ ರೂಪಾಯಿಗಿಂತ ಕಡಿಮೆಗೆ ಸಿಗುವುದಿಲ್ಲ. ಹೀಗಾಗಿ ತೋಟದಿಂದ ಮದರಂಗಿ ತಂದು ಅರೆದು ಹಚ್ಚಿಕೊಂಡೆ'.

'ಆದರೆ ಇದರಿಂದ ಕೂದಲು ಕಪ್ಪಾಗುವುದಿಲ್ಲವಲ್ಲ?'

'ಕಪ್ಪಾಗದಿದ್ದರೇನು? ಬಿಳಿ ಕಲೆಯಂತೂ ಉಳಿಯುವುದಿಲ್ಲವಲ್ಲ ?' ಅವನೆಂದ.

ಅಂದರೆ ಕೂದಲು ಕಪ್ಪಾಗದಿದ್ದರೂ ಅಡ್ಡಿಯಿಲ್ಲ...ಕೆಂಪಾದರೂ ಆಗಲಿ, ಬಿಳಿಯಾಗಿ ಉಳಿಯಬಾರದು- ಎಂದಾಯಿತು.

ಅಲೆಯೊಳಗಿಂದ ಅಲೆ ಹೊರಡುವಂತೆ ಪ್ರಶ್ನೆ ಹೊರಡುತ್ತದೆ. ನೂರೂವಿನ ಮಾತಿನಿಂದ ಒಂದು ಪ್ರಶ್ನೆ ಉದಿಸಿತು. ಕೂದಲಿನ ಬಿಳಿಬಣ್ಣದ ಮೇಲೆಯೇ ಮನುಷ್ಯನಿಗೆ ಅತ್ಯಧಿಕ ತಿರಸ್ಕಾರ! ಆದರೆ ಅದಕ್ಕೆನು ಕಾರಣ ?

ರವಿ ಕಾಣದುದನ್ನೂ ಕವಿ ಕಾಣುವನಂತೆ. ಈ ಪ್ರಶ್ನೆಗೆ ಪ್ರಾಚೀನ ರಸಿಕ ಕವಿ ಕೇಶವದಾಸರು ಉತ್ತರ ಕೊಟ್ಟಿದ್ದಾರೆ. ಅವರ ತಲೆ ಬಿಳಿಯಾದಾಗ ಬಹುದುಃಖವೆನಿಸಿತಂತೆ. ಅವರೆಂದರು- 'ದೇಹ ಮುದಿಯಾಗಿದೆ. ಆದರೆ ಮನಸ್ಸು ಮಾತ್ರ ಇನ್ನೂ ತಾರುಣ್ಯಾವಸ್ಥೆಯಲ್ಲೇ ಇದೆ. ತಾರುಣ್ಯವು ಭೋಗವಿಲಾಸಗಳ ಉತ್ಸವ. ಆದರೆ ಜನ ನನ್ನನ್ನು ಅಜ್ಜ, ಅಜ್ಜ ಎಂದು ಕರೆದು ಅವುಗಳಿಗೆ ತಡೆಹಾಕುತ್ತಿದ್ದಾರೆ!' ಎಂದ ಮೇಲೆ, ಕರಿಗೂದಲು ಬದುಕಿನ ಉಬ್ಬರದ ಗುರುತಾದರೆ ಬಿಳಿಗೂದಲು ಇಳಿತದ ಸೂಚಕ. ಉಬ್ಬರದಲ್ಲಿ ಆಸಕ್ತಿ ಹಾಗೂ ಇಳಿತದಲ್ಲಿ ಶಾಂತಿಯಿರುತ್ತದೆ. ಆಸಕ್ತಿಯಲ್ಲಿ ಪ್ರಾಪ್ತಿಯ ಇಚ್ಛೆಯಿದ್ದರೆ ಶಾಂತಿಯಲ್ಲಿ ಪ್ರಾಪ್ತಿಯ ಸಂತೋಷವಿದೆ. ಇಚ್ಛೆಯ ಶಕ್ತಿ ಆಕರ್ಷಣವಾದರೆ ಸಂತೋಷದ ಶಕ್ತಿ ಇಚ್ಛಾಹೀನತೆ.

ಕರಿಗೂದಲು ಯೌವನದ ಗುರುತಾದರೆ ಬಿಳಿಗೂದಲು ವೃದ್ಧಾಪ್ಯದ ಸಂಕೇತ. 'ಪಡೆ, ಪಡೆ, ಇನ್ನೂ ಪಡೆ'- ಎಂಬುದು ಯೌವನದ ವೃತ್ತಿಯಾದರೆ 'ತಡೆ, ತಡೆ, ಪಡೆದುದನ್ನೇ ಪರೀಕ್ಷಿಸು'- ಎನ್ನುವುದು ಮುದಿತನದ ವೃತ್ತಿ.

ಯೌವನವು ರಕ್ತವಾದರೆ ವೃದ್ಧಾಪ್ಯವು ಓಜಸ್ಸು. ಯೌವನ ಒಟ್ಟುಗೂಡಿಸುತ್ತಾ ಸಾಗುತ್ತದೆ. ವೃದ್ಧಾಪ್ಯ ಆ ಸಂಗ್ರಹವನ್ನೆಲ್ಲ ವ್ಯವಸ್ಥಿತವಾಗಿಡುತ್ತದೆ. ಯೌವನ ಯಾತ್ರೆಯೆನಿಸಿದರೆ ವೃದ್ಧಾಪ್ಯ ತಂಗುಮನೆ!

ಕಪ್ಪು ಬಣ್ಣ ಏಕಾಂಗಿತ್ವದ ಕುರುಹಾದರೆ ಬಿಳಿಬಣ್ಣ ಸರ್ವಾಂಗೀಣತೆಯ ಚಿಹ್ನೆ. ಏಕೆಂದರೆ ಕಪ್ಪು ಒಂದೇ ಬಣ್ಣ... ಆದರೆ ಬಿಳಿಯಲ್ಲಿ ಎಲ್ಲ ಬಣ್ಣಗಳ ಸಮನ್ವಯವಿದೆ.

'ಮುದಿತನ ಬಂದಿದೆ... ತಾರುಣ್ಯದಲ್ಲಿ ಸಂಗ್ರಹಿಸಿದುದನ್ನೆಲ್ಲ ಜಾಗರೂಕವಾಗಿ ಸಂರಕ್ಷಿಸು'-ಎನ್ನುತ್ತದೆ ಬಿಳಿಗೂದಲು.

ಆದರೆ ನಮ್ಮ ಮೋಹ ಇಲ್ಲಿ ಬೆಚ್ಚಿಬೀಳುತ್ತದೆ.... ಹೆದರುತ್ತದೆ.....

'ಇಲ್ಲ.. ಇಲ್ಲ... ಈಗಲೇ ಆ ವೇಳೆ ಒದಗಿಲ್ಲ. ಈಗಿನ್ನೂ ಸಂಗ್ರಹದ ಸಮಯ' ಎನ್ನುತ್ತದೆ ಅದು.

ಬಿಳಿಗೂದಲ ಬಗ್ಗೆ ನಮ್ಮಲ್ಲಿರುವ ತಿರಸ್ಕಾರ ಈ ಮೋಹದ ಪ್ರತಿಧ್ವನಿಯಾಗಿದೆ. ನಾವಿನ್ನೂ ಸಂಘರ್ಷ ಬಯಸುತ್ತೇವೆ, ಸುಖವನ್ನಲ್ಲ- ಎಂದು ಮೋಹ ಹೇಳುತ್ತದೆ. ಏಕೆಂದರೆ ಯೌವನದಲ್ಲಿ ಸಂಘರ್ಷವಿದೆ... ಉತ್ತೇಜನವಿದೆ... ವೃದ್ಧಾಪ್ಯದಲ್ಲಿ ಶಾಂತಿ ಹಾಗೂ ಸುಖವಿದೆ... ಸಂಘರ್ಷದಲ್ಲಿ ಜೀವನದ ರಸವಿದ್ದರೆ ಸುಖದಲ್ಲಿ ಜೀವನದ ಫಲ ಹುದುಗಿದೆ. ರಸ ಕಾವ್ಯವಾದರೆ ಸುಖ ಆಧ್ಯಾತ್ಮ !

ನಾವು ರಸದಲ್ಲಷ್ಟೇ ತನ್ಮಯರಾಗಿದ್ದೇವೆಂದರೆ ಫಲದ ಬಗ್ಗೆ ಸ್ವಲ್ಪವೂ ಯೋಚಿಸುವುದಿಲ್ಲ. ದಾರಿಯ ಮನೋಹರ ದೃಶ್ಯಗಳಲ್ಲೇ ತನ್ಮಯನಾದ ಯಾತ್ರಿಕನು ಗುರಿ ಮುಟ್ಟಿದ ಮೇಲೂ – 'ಆಂ! ಇನ್ನೂ ನಡೆಯುವ ಸಂದರ್ಭ ಇರುತ್ತಿದ್ದರೆ'– ಎಂದು ಯೋಚಿಸುವಂತೆಯೇ ಸಾವು ರಸಮಗ್ನರಾಗುತ್ತೇವೆ!

ಓ! ಈ ಮಾತುಕತೆ ನನ್ನನ್ನು ಎಲ್ಲಿಂದೆಲ್ಲಿಗೆ ಕೊಂಡೊಯ್ದಿತು! ಸಂಗತಿಯೇನೋ ಸಾಧಾರಣವಾದುದೇ. ಬೊಕ್ಕ ತಲೆಯ ನಡುವೆ ಇರುವ ೧೦-೧೫ ಕರಿಗೂದಲ ನಡುವೆ ಒಂದು ಬಿಳಿಗೂದಲು ಹಣಕುತ್ತಿತ್ತು. ಅದನ್ನು ಕಂಡು ನನಗೆ ಅಸಮಾಧಾನವಾಯಿತು.... ಕಿರು ಕತ್ತರಿಯಿಂದ ಅದನ್ನು ಕತ್ತರಿಸಿ ಒಗೆದುಬಿಟ್ಟೆ. ಇಷ್ಟೆ ತಾನೆ?–

(ಶ್ರೀ ಕನ್ಹಯ್ಯಾಲಾಲ್ ಮಿಶ್ರ ಪ್ರಭಾಕರ ಅವರ 'ಭೋಟೀ ಕೈಂಚೀ ಕೀ ಏಕ್ ಹೀ ಲಪಲಪೀಂ ಮೆಂ' ಎಂಬ ಲೇಖನದ ಭಾವಾನುವಾದ)

ಅನುವಾದ- ಬಳ್ಳೂರು ಸುಬ್ರಾಯ ಅಡಿಗ

(ಸಾಭಾರ : ಪುಸ್ತಕ ಪ್ರಪಂಚ)

***

ಕೃಷಿ ಕೆಲಸಗಾರರ ಸಮಸ್ಯೆಗಳು

–ಟಿ. ಕೆ. ವಾಸುದೇವ ಭಟ್

ಗ್ರಾಮೀಣ ಕೆಲಸಗಾರರದು ಒಂದು ಬೃಹತ್ ಸಮಸ್ಯೆ. ಇದರ ಪರಿಹಾರ ತುಂಬ ಕಷ್ಟಸಾಧ್ಯ. ಗ್ರಾಮೀಣ ಕೆಲಸಗಾರರ ಸಂಖ್ಯೆ ಇತರ ಔದ್ಯೋಗಿಕ ಗುಂಪುಗಳವಕ್ಕಿಂತಲೂ ಅಧಿಕವಾಗಿದೆ. ಇದಕ್ಕೆ ಕಾರಣವೇನು ಮತ್ತು ಇದನ್ನು ಹೇಗೆ ಪರಿಹರಿಸಬಹುದೆಂಬುದೇ ಈ ಪ್ರಬಂಧದ ವಿಷಯ. ಈ ಸಮಸ್ಯೆಯನ್ನು ವಿಶದಪಡಿಸಲು ಮತ್ತು ಇದರ ಗುಣ ಲಕ್ಷಣಗಳನ್ನು ಬೇರ್ಪಡಿಸಿ ತೋರಿಸಲು ಬೇಕಾದ ಅನುಭವವನ್ನು ನಾನು ಈ ಮುಂಚೆ ಸಾಮಾಜಿಕ ಅವಲೋಕನಕ್ಕೋಸ್ಕರ ಆರಿಸಿಕೊಂಡ ಮೈಸೂರು ರಾಜ್ಯದ ಎರಡು ಹಳ್ಳಿಗಳಿಂದ ತೆಗೆದುಕೊಂಡಿದ್ದೇನೆ. ಗ್ರಾಮೀಣ ಕೆಲಸಗಾರರೆಂದರೆ ಒಡೆತನದ ಅಥವಾ ಗೇಣಿಗೆ ಪಡೆದುಕೊಂಡ ಭೂಮಿ ಇಲ್ಲದೆ ಸಣ್ಣ ಮನೆಗಳಲ್ಲಿ ಬೇರೆಯವರ ಒಕ್ಕಲಾಗಿ ಇದ್ದು ದೈನಂದಿನ ವೇತನಕ್ಕೆ ಊರಿನ ವ್ಯವಸಾಯದ ಮತ್ತು ಇತರ ಕೆಲಸಗಳನ್ನು ಮಾಡಿಕೊಂಡು ಜೀವನ ಮಾಡುವವರು. ಇಂಥವರ ಸಂಖ್ಯೆ ಪ್ರತಿಗ್ರಾಮದಲ್ಲೂ ಅತ್ಯಧಿಕ ಪ್ರಮಾಣದಲ್ಲಿದೆ. ಇವರ ಒಟ್ಟು ಜನಸಂಖ್ಯೆ ಪ್ರತಿವರ್ಷ ದೊಡ್ಡ ಪ್ರಮಾಣದಲ್ಲಿ ಏರುತ್ತಿದೆ. ಆದ್ದರಿಂದಲೇ ಗ್ರಾಮೀಣ ಕೆಲಸಗಾರರ ಸಮಸ್ಯೆ ತುಂಬ ಜಟಿಲವಾದ್ದು. ಇವರು ಹೆಚ್ಚಾಗಿ ಅದೇ ಊರಿನಲ್ಲಿ ಹುಟ್ಟಿ ಬೆಳೆದವರು ಅಥವಾ ಆ ಊರಿನ ಬಂಧುಬಳಗಕ್ಕೆ ಸೇರಿದವರು; ಕೆಲವು ವೈಯುಕ್ತಿಕ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಊರನ್ನು ಬಿಡಲು ಸಾಧ್ಯವಾಗದವರು. ಹಳ್ಳಿಯ ಸಣ್ಣ ವ್ಯವಸಾಯಗಾರರಿಗೂ ಇವರಿಗೂ ಕೆಲವು ಗಣನೀಯ ವ್ಯತ್ಯಾಸಗಳಿವೆ. ಸಣ್ಣ ಹಿಡುವಳಿದಾರರು ಒಕ್ಕಲುತನ ವಾಡಿ ಧಣಿಯು ಪಾಲನ್ನು ಕೊಟ್ಟು ಮರ್ಯಾದೆಯಿಂದ ಜೀವನ ಮಾಡಬೇಕಾದರೆ ತುಂಬ ಪರಿಶ್ರಮ ಮತ್ತು ಬುದ್ಧಿಸಾಮರ್ಥ್ಯ ಅತ್ಯಗತ್ಯ. ಸಣ್ಣ ಪ್ರಮಾಣದಲ್ಲಿ ಒಕ್ಕಲುತನ ಮಾಡುವವರಲ್ಲಿ ಕಷ್ಟನಷ್ಟಗಳನ್ನನುಭವಿಸುವವರೇ ಹೆಚ್ಚಾಗಿ ಇದ್ದಾರೆ. ಅವರಿಗೂ ಭೂಮಿ ಇಲ್ಲದ ಬೇಸಾಯ ಕೆಲಸಗಾರರಿಗೂ ಜೀವನಕ್ರಮದಲ್ಲಿಯೂ ತಿನ್ನುವ ಉಡುವ ಸಾಮಗ್ರಿಗಳಲ್ಲಿಯೂ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ಸಮಾಜ ಕೊಡುವ ಸ್ಥಾನಮಾನದಲ್ಲಿ ಮಾತ್ರ ಸಣ್ಣ ಹಿಡುವಳಿಯಲ್ಲಿ ಗೇಣಿ ವ್ಯವಸಾಯದಲ್ಲಿ ಸೋತ ಭೂ ಒಡೆಯನಿಗೂ ಯಾವರೀತಿಯ ಭೂಮಿಯೂ ಇಲ್ಲದ ದಿನಗೂಲಿಗೂ ತುಂಬ ವ್ಯತ್ಯಾಸವಿದೆ. ಭೂಮಿಯ ಒಡೆತನವೊಂದೇ? ಸಮಾಜದಲ್ಲಿ ಸಾಕಷ್ಟು ಸ್ಥಾನಮಾನವನ್ನು ಒದಗಿಸುವುದರಿಂದ ಸಣ್ಣ ಹಿಡುವಳಿದಾರರು ಉತ್ಪತ್ತಿಯನ್ನು ಅಷ್ಟಾಗಿ ಗಣನೆಗೆ

ತರುವುದಿಲ್ಲ. ಪ್ರಾಯಶಃ ಹೀಗೆ ಆದ್ದರಿಂದಲೇ ವ್ಯವಸಾಯದಲ್ಲಿ ಸ್ಪರ್ಧೆ ಏರ್ಪಡಲಿಲ್ಲ ಮತ್ತು ಉತ್ಪತ್ತಿ ಹೆಚ್ಚಾಗಲು ಬೇಕಾದ ಸಾಮಾಜಿಕ ವಾತಾವರಣ ಸಿಗಲಿಲ್ಲ.

ಭೂಮಿ ಇಲ್ಲದ ಗ್ರಾಮೀಣ ಕೆಲಸಗಾರರ ಮುಖ್ಯ ಸಮಸ್ಯೆಗಳು ಯಾವುವೆಂದು ನೋಡುವಾಗ ಮುಖ್ಯವಾಗಿ ತೋರಿಬರುವವು ಈ ರೀತಿ ಇವೆ; ಒಂದನೆಯದಾಗಿ ಕೆಲಸದ ಅನಿಶ್ಚಿತತೆ ಮತ್ತು ಕೆಲಸಕ್ಕಾಗಿ ಬೇರೆಬೇರೆ ಕಡೆಗೆ ಗೊತ್ತುಗುರಿ ಇಲ್ಲದೆ ಅಲೆಯುವುದು. ಕೆಲಸವನ್ನು ಮತ್ತು ಕೆಲಸಮಾಡುವ ಸಮಯವನ್ನು ಸರಿಯಾಗಿ ರೂಪಿಸಲಾಗದಿದ್ದಾಗ ಕೆಲಸಮಾಡುವವರಿಗೂ ಕೆಲಸ ಕೊಡುವವರಿಗೂ ಬರುವ ಬಿಕ್ಕಟ್ಟಿನ ಪ್ರಸಂಗಗಳು. ಅಂದರೆ ಗ್ರಾಮದ ಆರ್ಥಿಕ ವ್ಯವಸ್ಥೆಯಲ್ಲಿ ಭೂಮಿ ಇಲ್ಲದ ಗ್ರಾಮೀಣ ಕೆಲಸಗಾರನ ಸ್ಥಾನ ಭದ್ರವಾಗಿಲ್ಲ. ಇದರಿಂದಾಗಿ ಹುಟ್ಟಿಬಂದ ಅವ್ಯವಸ್ಥೆ ಗ್ರಾಮದ ವ್ಯವಸಾಯದ ದುರವಸ್ಥೆಗೆ ಮುಖ್ಯ ಕಾರಣ. ಕೆಲವು ಗ್ರಾಮಗಳಲ್ಲಿ ಅಲ್ಲಿಯಭೂಮಿಯ ಸಾಗುವಳಿಗೆ ಬೇಕಾದ್ದಕ್ಕಿಂತ ತುಂಬ ಹೆಚ್ಚು ಮಂದಿ ದಿನಗೂಲಿಗಳು ಇರುವುದರಿಂದ ವೇತನ ಕಡಿಮೆಯಾಗಿ ಕೆಲಸಗಾರರಲ್ಲಿ ಅತೃಪ್ತಿ ಹುಟ್ಟಿದೆ. ಈ ಅತೃಪ್ತಿ ಅವರ ಕೆಲಸದಿಂದ ಸಿಗಬಹುದಾದ ಪ್ರತಿಫಲವನ್ನು ಕಡಿಮೆಮಾಡಿ ವ್ಯವಸಾಯದ ಉತ್ಪತ್ತಿಯನ್ನು ಕೆಳಗಿಳಿಸಿದೆ. ಇನ್ನು ಕೆಲವು ಪ್ರದೇಶಗಳಲ್ಲಿ ವ್ಯವಸಾಯದೊಂದಿಗೆ ಬೇರೆ ಉಪವೃತ್ತಿ ಇದ್ದರೆ ಅಥವಾ ನಗರ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಸಿಗಬಹುದಾದರೆ ವ್ಯವಸಾಯದ ಕೆಲಸಕ್ಕೆ ಬೇಕಾದ ಕೆಲಸಗಾರರ ಸರಬರಾಯಿ ಆಗದೆ ಅಲ್ಲಿ ಉತ್ಪತ್ತಿ ಕಡಿಮೆಯಾಗಿದೆ.

ಗ್ರಾಮೀಣ ಕೆಲಸಗಾರರ ಆರ್ಥಿಕ ಸಮಸ್ಯೆಯನ್ನು ಭೂಮಿ ಇಲ್ಲದ ಸಮಸ್ಯೆ ಎಂದು ವಿವರಿಸುವುದು ಈಗ ರೂಢಿಯಲ್ಲಿದೆ. ಈಗ ಊರಿನಲ್ಲಿರುವ ಕೆಲಸಗಾರರೆಲ್ಲರಿಗೂ ಭೂಮಿಯ ವಿತರಣೆ ಮಾಡಿ ಅವರ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಬಹುದೆಂಬುದು ಸುಳ್ಳು ಮಾತು. ಕಾರಣವೇನೆಂದರೆ ಒಂದನೆಯದಾಗಿ ಹಳ್ಳಿಯಲ್ಲಿರುವ ಎಲ್ಲ ಕೆಲಸಗಾರರಿಗೆ ಜೀವನಕ್ಕೆ ಸಾಕಷ್ಟು ಭೂಮಿಯನ್ನು ಒದಗಿಸಲು ಈಗ ಇರುವ ಭೂಮಿ ಸಾಕಾಗದು. ಎರಡನೆಯದಾಗಿ ಆ ರೀತಿ ಬರಿಯ ಭೂಮಿಯ ವಿತರಣೆಯಿಂದ ಎಕರೆ ಒಂದರ ಸರಾಸರಿ ಉತ್ಪತ್ತಿಯನ್ನಾಗಲೀ ವ್ಯಕ್ತಿಯ ಸರಾಸರಿ ಉತ್ಪತ್ತಿಯನ್ನಾಗಲೀ ಹೆಚ್ಚು ಮಾಡಲು ಸಾಧ್ಯವಿಲ್ಲ. ಇದಕ್ಕೆ ಮುಖ್ಯ ಕಾರಣ, ನಮ್ಮ ರೈತರಲ್ಲಾಗಲಿ ಗ್ರಾಮೀಣ ಕೆಲಸಗಾರರಲ್ಲಾಗಲಿ ಆಧುನಿಕ ವ್ಯವಸಾಯದ ಜ್ಞಾನ ಇಲ್ಲದಿರುವುದು. ಅದಕ್ಕೆ ಬೇಕಾದ ಬಂಡವಾಳ ಮತ್ತು ಆಡಳಿತ ಕೂಡ ಸಿಗುವುದು ತುಂಬ ಕಷ್ಟ. ಆದ್ದರಿಂದ ವ್ಯವಸಾಯ ಮಾಡಬಹುದಾದ ಶುಷ್ಕ ಭೂಮಿಗಳನ್ನು ವ್ಯವಸಾಯ ಮಾಡಬಲ್ಲ ಕೆಲಸಗಾರರಿಗೆ ವಿತರಣೆ ಮಾಡುವುದರೊಂದಿಗೆ ಗ್ರಾಮೀಣ ಕೆಲಸಗಾರರ ವ್ಯಾವಸಾಯಿಕ ಉತ್ಪತ್ತಿ ಶಕ್ತಿಯನ್ನು ಹೆಚ್ಚಿಸಲು ಬೇಕಾದ ಶೈಕ್ಷಣಿಕ ಕಾರ್ಯಗಳನ್ನು ಜಾರಿಗೆ ತರುವುದು ತೀರ ಅಗತ್ಯವಾಗಿದೆ. ನಮ್ಮ ಇಂದಿನ ಗ್ರಾಮೀಣ ಕೆಲಸಗಾರರಿಗೆ ಸಂಬಂಧಪಟ್ಟ ಅಂಕಿ

ಅಂಶಗಳು ಅವರ ಸಮಸ್ಯೆಗಳನ್ನು ಪರಿಹರಿಸಲು ಬೇಕಾದ ಪ್ರಚೋದನೆಯನ್ನು ನೀಡುವುದಿಲ್ಲ. ಕಾರಣವೇನೆಂದರೆ ಸರ್ಕಾರವಾಗಲಿ ವಿದ್ಯಾಸಂಸ್ಥೆಗಳಾಗಲಿ ಗ್ರಾಮೀಣ ಕಾರ್ಮಿಕರ ಸಮಸ್ಯೆಗಳನ್ನು ಆಳವಾಗಿ ಯೋಚಿಸುವ ಗೋಜಿಗೆ ಈ ತನಕ ಹೋಗಿಲ್ಲ. ವಿದ್ಯಾವಂತರ ಮತ್ತು ಕಾರ್ಖಾನೆಯ ಕಾರ್ಮಿಕರ ಸಮಸ್ಯೆಗಳು ರಾಜಕೀಯ ದೃಷ್ಟಿಯಲ್ಲಿ ಹೆಚ್ಚು ಮಹತ್ವದವಾದ್ದರಿಂದ ಸರ್ಕಾರದ ಗಮನ ಹಳ್ಳಿಯ ಕೆಲಸಗಾರರ ಕಡೆಗೆ ಹರಿದಿಲ್ಲ. ಆದರೆ ಔದ್ಯೋಗಿಕ ಕ್ರಾಂತಿ ದೇಶದಾದ್ಯಂತ ಹಬ್ಬದಿದ್ದುದರಿಂದಲೂ ಹಳ್ಳಿಗಳ ಸಂಖ್ಯೆ ಅತ್ಯಧಿಕವಾಗಿರುವುದರಿಂದಲೂ ಹಳ್ಳಿಯ ಕಾರ್ಮಿಕರ ಆರ್ಥಿಕ ಸಮಸ್ಯೆಗಳ ಪರಿಹಾರವಾಗದೆ ದೇಶದ ಆರ್ಥಿಕ ಉನ್ನತಿ ಅಸಾಧ್ಯ.

ಗ್ರಾಮೀಣ ಕಾರ್ಮಿಕರ ಆರ್ಥಿಕ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದೆಂಬುದಾಗಿ ಆಲೋಚಿಸುವಾಗ ಮೊದಲು ತೋರುವುದೇನೆಂದರೆ, ಈ ಸಮಸ್ಯೆಗೆ ಸಾಕಷ್ಟು ಪ್ರಾಧಾನ್ಯ ಕೊಡಬೇಕಾದ್ದು. ಪ್ರತಿ ಹಳ್ಳಿಯಲ್ಲೂ ಇರುವ ಗ್ರಾಮೀಣ ಕೆಲಸಗಾರರ ಆಯವ್ಯಯ, ಮಾಡುವ ಕೆಲಸದ ವಿವರ ಮತ್ತು ಮಾಡಬಹುದಾದ ಕೆಲಸಗಳ ವಿವರ ಅತಿ ಅಗತ್ಯವಾಗಿದೆ. ಬೇಸಾಯಕೆಲಸಗಾರರ ಸಂಘ ಮತ್ತು ಉದ್ಯೋಗ ವಿನಿಮಯ ಕೇಂದ್ರಗಳನ್ನು ಗ್ರಾಮ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಏರ್ಪಡಿಸಬೇಕು. ಗ್ರಾಮೀಣ ಕಾರ್ಮಿಕರನ್ನು ಈ ಕಾರ್ಮಿಕ ಸಂಘಗಳ ಮೂಲಕ ಸಂಘಟಿಸಬೇಕು. ಈ ರೀತಿ ಸಂಘಟಿಸಿ ಮಾಡಬೇಕಾದ ಕೆಲಸವೇನೆಂದರೆ, ರಾಜ್ಯದ ಅಥವಾ ಹಳ್ಳಿಗಳ ಆರ್ಥಿಕವ್ಯವಸ್ಥೆಯಲ್ಲಿ ಅವರ ಸ್ಥಾನವನ್ನು ಸುಭದ್ರಗೊಳಿಸುವುದು. ಗ್ರಾಮೀಣ ಕಾರ್ಮಿಕರ ಸ್ಥಾನ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಸುಭದ್ರಗೊಳ್ಳಬೇಕಾದರೆ ಅವರ ದುಡಿಮೆ ಮೊದಲನೆಯದಾಗಿ ವ್ಯವಸಾಯದ ಅಭಿವೃದ್ಧಿಗೂ ಎರಡನೆಯದಾಗಿ ಇತರ ಗ್ರಾಮೀಣ ಉದ್ಯೋಗಗಳ ಅಭಿವೃದ್ಧಿಗೂ ಅತ್ಯಂತ ಅವಶ್ಯಕವಾದ ಘಟಕವೆಂಬುದರ ಪ್ರಜ್ಞೆ ಹಿಡುವಳಿದಾರರಲ್ಲಿ ಮತ್ತು ಇತರ ಜನರ ಮನಸ್ಸಿನಲ್ಲಿ ಮೂಡಬೇಕು. ಗ್ರಾಮೀಣ ಕಾರ್ಮಿಕರೂ ಕೂಡ ಭೂಮಿಯಲ್ಲಿ ಉತ್ಪತ್ತಿಯಾಗುವುದು ತಮ್ಮ ಗೈಮೆಯಿಂದ ಮಾತ್ರವಲ್ಲ, ಅದಕ್ಕೆ ಅಷ್ಟೇ ಅಗತ್ಯವಾದ ಇತರ ಘಟಕಗಳು ಕೂಡ ತಕ್ಕ ಪ್ರಮಾಣದಲ್ಲಿ ಸೇರುತ್ತವೆ ಎಂಬುದರ ತಿಳುವಳಿಕೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಆರ್ಥಿಕರಂಗದಲ್ಲಿರುವ ಬೇರೆಬೇರೆ ವರ್ಗಗಳೊಂದಿಗೆ ಕೊಟ್ಟು ತೆಗೆದುಕೊಳ್ಳುವ ತತ್ವವನ್ನವಲಂಬಿಸಿಕೊಂಡೇ ಕಾರ್ಮಿಕರು ತಮ್ಮ ಸಂಬಂಧವನ್ನು ಇತರ ಗುಂಪುಗಳೊಡನೆ ಬೆಳೆಸಬೇಕಾಗುತ್ತದೆ. ಗ್ರಾಮೀಣ ಕಾರ್ಮಿಕರ ಸಂಘಟನೆ ದೇಶದ ಸಂಘಟನೆಯಲ್ಲಿ ಒಂದು ದೊಡ್ಡ ಹೆಜ್ಜೆ. ಗ್ರಾಮಸಮಾಜದಲ್ಲಿರುವ ಎಲ್ಲ ಕಾರ್ಮಿಕ ಮತ್ತು ಔದ್ಯೋಗಿಕ ಗುಂಪುಗಳ ಸಮರಸವಾದ ಬೆಳವಣಿಗೆ ಮತ್ತು ಸಂಘಟನೆಯಿಂದ ಮಾತ್ರ ಗ್ರಾಮಗಳ ಪುನರುಜ್ಜೀವನ ನಡೆಸಲು ಸಾಧ್ಯವಿದೆ. ಭೂಮಿ ಇಲ್ಲದ ಕಾರ್ಮಿಕರ ಸಂಘಟನೆಯ

ಮುಖ್ಯ ಉದ್ದೇಶವೇನೆಂದು ಆಲೋಚಿಸುವುದು ಅತ್ಯಂತ ಅಗತ್ಯ. ಭೂಮಿ ಇಲ್ಲದ ಕಾರ್ಮಿಕರು ಈಗ ಹೆಚ್ಚಾಗಿ ದೈಹಿಕ ಶ್ರಮದಿಂದ ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ನಿರಕ್ಷರರು ಮತ್ತು ಯಾವ ಒಂದು ಉದ್ಯೋಗಕ್ಕೂ ಬೇಕಾದ ಮಾಹಿತಿ ಮತ್ತು ಅಭ್ಯಾಸ ಇಲ್ಲದವರು. ಇವರು ಹೆಚ್ಚಾಗಿ ಹಳ್ಳಿಯ ವ್ಯವಸಾಯದ ಕೆಲಸವನ್ನು ಮಾಡುತ್ತಾರೆ. ಹಳ್ಳಿಯ ವ್ಯವಸಾಯದಲ್ಲಿ ಇವರು ವಹಿಸುವ ಪಾತ್ರ ಪ್ರಮುಖವಾದುದು. ಇವರಿಲ್ಲದೆ ವ್ಯವಸಾಯ ನಡೆಯಲಿಕ್ಕಿಲ್ಲವೆಂದು ಹೇಳಿದರೂ ತಪ್ಪಾಗದು. ಆದ್ದರಿಂದ ಇವರ ಸ್ಥಿತಿಗತಿಯಲ್ಲಿ ಅಭಿವೃದ್ಧಿಯಾಗುವುದು ಹಳ್ಳಿಯ ವ್ಯವಸಾಯದ ಅಭಿವೃದ್ಧಿಗೆ ಅತಿ ಅಗತ್ಯ ಮತ್ತು ಇವರಿಗೆ ಆಧುನಿಕ ವ್ಯವಸಾಯದ ಗಾಳಿ ಸೋಂಕದೆ ಹಳ್ಳಿಯ ವ್ಯವಸಾಯ ಉತ್ತಮವಾಗುವುದು ಸಾಧ್ಯವಿಲ್ಲ. ಕಾರ್ಮಿಕರ ಸಂಘಟನೆ ಮಾಡುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ವಿಷಯಗಳಾವುವೆಂದರೆ; ೧.ಅವರಿಗೆ ವ್ಯವಸಾಯ ಮತ್ತು ಹಳ್ಳಿಯ ಇತರ ಉಪಜೀವಿಕೆಗಳಲ್ಲಿ ಆಧುನಿಕ ಜ್ಞಾನ ಮತ್ತು ತರಬೇತು ಸಿಗುವಂತೆ ಮಾಡುವುದು. ೨. ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಹಳ್ಳಿಯಲ್ಲಿ ಅವರಿಗೆ ಉದ್ಯೋಗ ಸಿಗುವಂತೆ ಮಾಡುವುದು ಮತ್ತು ಅವರ ವೇತನ ಮತ್ತು ನೌಕರಿಯ ಲೆಕ್ಕಗಳನ್ನು ಸರಿಯಾಗಿ ನಮೂದಿಸುವುದು. ನೌಕರಿಗೆ ಇಟ್ಟುಕೊಳ್ಳುವ ಮಾಲೀಕರನ್ನು ಕೂಡ ಸಂಘಟಿಸಿ ಅವರ ಹಕ್ಕು ಬಾಧ್ಯತೆಗಳನ್ನೂ ಸರಿಯಾಗಿ ನಮೂದಿಸುವುದು. ಕಾರ್ಮಿಕರ ಮತ್ತು ರೈತರ ಸಂಘಟನೆಯ ಮೂಲಕ ವ್ಯವಸಾಯವನ್ನು ಒಂದು ಉದ್ಯಮವನ್ನಾಗಿ ಮಾಡಿ ಅದನ್ನು ಆಧುನಿಕ ರೀತಿಯಲ್ಲಿ ನಡೆಸಬಹುದು. ಗ್ರಾಮೀಣ ಕೆಲಸಗಾರರಿಗೆ ಕೆಲಸ ಒದಗಿಸಿ ಅವರ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಬಹುದು.

ಅರ್ಥ ಶಾಸ್ತ್ರಜ್ಞರು ವಸ್ತುಗಳನ್ನು ಕಾರ್ಖಾನೆಯಲ್ಲಿ ಅಥವಾ ಇನ್ನಿತರ ರೀತಿಯಲ್ಲಿ ತಯಾರಿಸಲು ನಾಲ್ಕು ಬಗೆಯ ಘಟಕಗಳು ಬೇಕೆಂದು ಹೇಳುವುದು ರೂಢಿಯಲ್ಲಿದೆ; ಭೂಮಿ, ಬಂಡವಾಳ, ಕೆಲಸಗಾರರು ಮತ್ತು ಈ ಮೂರು ಘಟಕಗಳನ್ನು ಸಂಘಟಿಸುವವರು- ಈ ನಾಲ್ಕು ಘಟಕಗಳು. ಭೂಮಿ ಮತ್ತು ಬಂಡವಾಳಕ್ಕೆ ಮಾಲೀಕರಿದ್ದಾರೆ. ಇವುಗಳ ವ್ಯವಹಾರದಲ್ಲಿ ದೇಶದ ಆರ್ಥಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಏರುಪೇರುಗಳಾಗುತ್ತವೆ. ಭೂಮಿ ಬಂಡವಾಳದಷ್ಟೇ ರೀತಿಯಲ್ಲಿ ಬೇಕುಬೇಕಾದ ಉಪಯೋಗಕ್ಕೆ ಬೀಳುವುದಿಲ್ಲ. ದೇಶದಲ್ಲಿರುವ ಬಂಡವಾಳದ ಮಾರುಕಟ್ಟೆಯಲ್ಲಿ ಒಂದುರೀತಿಯ ಆಡಳಿತ ಇದೆ. ಆದರೆ ಈ ಆಡಳಿತದ ಬಹುಭಾಗ ಬ್ಯಾಂಕುಗಳಿಂದಾಗಿ ಏರ್ಪಟ್ಟಿದೆ. ಆದ್ದರಿಂದ ಬ್ಯಾಂಕುಗಳ ಆಡಳಿತ ಸರಿಯಾಗಿ ನಡೆದರೆ ಬಂಡವಾಳದ ಪೂರೈಕೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ಆದರೆ ದೇಶದ ಎಲ್ಲ ಭೂಮಿಯೂ ಯಾವುದೇ ಒಂದು ಸಂಸ್ಥೆಯ ಆಡಳಿತಕ್ಕಾಗಲಿ ಒಳಪಟ್ಟು ಬೇರೆಬೇರೆ ಉಪಯೋಗಕ್ಕೆ

ಹೋಗುತ್ತಿಲ್ಲ. ಇದು ವ್ಯವಸಾಯದಲ್ಲಿ ಅತಿ ದೊಡ್ಡ ಪಾತ್ರವಹಿಸುವುದರಿಂದಲೂ ವ್ಯವಸಾಯ ದೇಶದ ಆರ್ಥಿಕವ್ಯವಸ್ಥೆಯಲ್ಲಿ ಪ್ರತ್ಯೇಕವಾಗಿ ಉಳಿದುದರಿಂದಲೂ ಭೂಮಿಯಿಂದ ನಾವೆಷ್ಟು ಪ್ರಯೋಜನ ಪಡೆಯಬೇಕಿತ್ತೋ ಅಷ್ಟು ಪ್ರಯೋಜನ ಇನ್ನೂ ನಮಗೆ ಸಿಗದಂತಾಗಿದೆ. ಈ ಎರಡು ಘಟಕಗಳಿಗಿಂತಲೂ ಹೆಚ್ಚಾಗಿರುವುದು ಕೆಲಸಗಾರರ ಸರಬರಾಯಿ. ನಮ್ಮ ದೇಶದಲ್ಲಿ ಬಂಡವಾಳದ ಕೊರತೆ ಇದೆ. ಉತ್ಪಾದನೆಯನ್ನು ಸಂಘಟಿಸಿ ನಡೆಸಬಲ್ಲವರ ಕೊರತೆ ಇದೆ. ಆದರೆ ಕೆಲಗಾರರ ಕೊರತೆ ಈ ತನಕ ಬರಲಿಲ್ಲ. ಕೆಲಸಗಾರರ ಸಂಖ್ಯೆ ಸಾಕಷ್ಟು ಇದ್ದರು ಅವರಲ್ಲಿ ಕೆಲಸದ ನೈಪುಣ್ಯ ಮತ್ತು ಅನುಭವ ಸಾಕಷ್ಟು ಇಲ್ಲ. ಅವರನ್ನು ಒಂದುಗೂಡಿಸುವ ಮತ್ತು ಅವರ ಕ್ರಿಯಾಶಕ್ತಿಯನ್ನು ಹೆಚ್ಚಿಸುವ ಯಾವ ಸಂಸ್ಥೆಯೂ ಇಲ್ಲ. ಆದ್ದರಿಂದಲೇ ದೇಶದ ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ಆದ್ದರಿಂದ ಗ್ರಾಮೀಣ ಕೆಲಸಗಾರರನ್ನು ಸಂಘಟಿಸಲು, ದೇಶವನ್ನು ಕಟ್ಟುವ ಕೆಲಸದಲ್ಲಿ ಅವರನ್ನು ಸುಸಜ್ಜಿತರನ್ನಾಗಿಸಲು, ಅವರಿಗೆ ಸಾರ್ಥಕ ಬಾಳಿನ ಸಂತೋಷವನ್ನೀಯಲು ಒಂದು ಹೊಸ ಸಂಸ್ಥೆಯನ್ನೂ ಹೊಸ ಧೋರಣೆಯನ್ನೂ ರೂಪಿಸುವುದು ಅತ್ಯಗತ್ಯ.

ಜಪಾನಿನ ವ್ಯವಸಾಯದಲ್ಲಿ ಭೂಮಿಯ ಒಡೆಯ ಮತ್ತು ಅವನ ಕುಟುಂಬದವರು ಸಣ್ಣ ಪುಟ್ಟ ಯಂತ್ರಸಾಮಗ್ರಿ ಬಳಸಿ ಸಾಕಷ್ಟು ಬೆಳೆಯನ್ನು ಬೆಳೆಯುತ್ತಾರೆ. ಅಂತೆಯೇ ಕಾರ್ಖಾನೆಯಲ್ಲಿ ಉತ್ಪಾದಿಸುವ ಸಾಮಗ್ರಿಗಳನ್ನು ಕೂಡ ಕೆಲಸಗಾರರು ಮನೆಗಳಲ್ಲೇ ಇದ್ದುಕೊಂಡು ಮಾಡುವ ವ್ಯವಸ್ಥೆ ಇದೆ. ಈ ವ್ಯವಸ್ಥೆ ಜಪಾನಿನ ಆರ್ಥಿಕ ಪ್ರಗತಿಗೆ ತುಂಬ ಸಹಾಯಕವಾಗಿದೆ. ಅಂಥ ವ್ಯವಸ್ಥೆ ನಮ್ಮ ದೇಶಕ್ಕೆ ಅನ್ವಯಿಸುತ್ತದೆಂದು ಹೇಳಲಾಗದು. ಏಕೆಂದರೆ ನಮ್ಮ ಆರ್ಥಿಕ ವ್ಯವಸ್ಥೆ ಈ ಕೆಲವು ವರ್ಷಗಳಲ್ಲಿ ನಡೆದುಬಂದ ಕ್ರಮ ಇದಕ್ಕೆ ಪ್ರತಿಕೂಲವಾಗಿದೆ. ಆದ್ದರಿಂದ ನಮ್ಮ ದೇಶದ ವ್ಯವಸಾಯದಲ್ಲಿ ಗ್ರಾಮೀಣ ಕೆಲಸಗಾರರ ಮತ್ತು ಹಿಡುವಳಿದಾರರ ಸಂಘಟನೆ ಸಮಂಜಸವಾದುದು.

ದೈಹಿಕ ಶ್ರಮ ನಮ್ಮ ಇಂದಿನ ವ್ಯವಸಾಯ ಕ್ರಮದಲ್ಲಿ ಅತಿ ಮುಖ್ಯವಾದ ಅಂಶ. ಇನ್ನು ಮುಂದೆ ಕೂಡ ದೈಹಿಕ ಶ್ರಮ ಮಾಡುವವರನ್ನು ವ್ಯವಸಾಯ ಕ್ಷೇತ್ರದಲ್ಲಿ ಇರಿಸಿಕೊಂಡೇ ನಮ್ಮ ವ್ಯವಸಾಯ ಬೆಳೆಯಬೇಕಾಗಿದೆ. ಕೈಗಾರಿಕೆಗಳಲ್ಲಿ ಶ್ರಮಿಸುವವರ ಸಂಘಟನೆಯಂತೆಯೇ ವ್ಯವಸಾಯ ಕ್ಷೇತ್ರದ ಕೆಲಸಗಾರರ ಸಂಘಟನೆಯಾಗದಿದ್ದರೆ ದೇಶದ ಅಭಿವೃದ್ಧಿಗೆ ಮತ್ತು ರಾಜಕೀಯ ಸ್ಥಿರತೆಗೆ ತೊಂದರೆ ಬರಬಹುದು. ಆದರೆ ಇನ್ನು ಮುಂದೆ ವ್ಯವಸಾಯದ ಕೆಲಸಗಾರರನ್ನು ಸಂಘಟಿಸುವಾಗ ಅವರಿಗೆ ನವೀನ ಮಾದರಿಯ ಕೃಷಿ ಸಲಕರಣೆ, ರಾಸಾಯನಿಕ ಗೊಬ್ಬರಗಳ ಉಪಯೋಗದ ಬಗ್ಗೆ ಸಾಕಷ್ಟು ತರಬೇತು ದೊರಕಿಸಿಕೊಡುವುದು ಅವಶ್ಯ. ಜಪಾನಿನಂತೆ ಹಿಡುವಳಿದಾರನೇ ತನ್ನ ಕುಟುಂಬದ ವ್ಯಕ್ತಿಗಳೊಂದಿಗೆ ವ್ಯವಸಾಯದ ಸಂಪೂರ್ಣ ಕೆಲಸವನ್ನು ಮಾಡುವುದಾದರೆ ಗ್ರಾಮೀಣ

ಕೆಲಸಗಾರರನ್ನು ವ್ಯವಸಾಯದಲ್ಲಿ ಹೊಂದಿಸುವ ಸಮಸ್ಯೆ ಬರಲಾರದು. ಆದರೆ ನಮ್ಮ ದೇಶದಲ್ಲಿ ಈಗ ಇರುವ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಆದರೂ ಮುಂದೆ ಕೂಡ ಗ್ರಾಮೀಣ ಕೆಲಸಗಾರರನ್ನು ವ್ಯವಸಾಯ ಕಸುಬಿನೊಂದಿಗೆ ಮತ್ತು ಹಿಡುವಳಿದಾರರೊಂದಿಗೆ ಸಮರಸವಾಗಿ ಸೇರಿಸಿದರೆ ಮಾತ್ರ ವ್ಯವಸಾಯದಲ್ಲಿ ಅಭಿವೃದ್ಧಿ ಶೀಘ್ರದಲ್ಲಿ ಆಗಿ ಗ್ರಾಮೀಣ ಕೆಲಸಗಾರರಿಂದ ಏಳಬಹುದಾದ ರಾಜಕೀಯ ಸಮಸ್ಯೆಗಳ ಪರಿಹಾರವಾದೀತು. ನಮ್ಮ ಇಂದಿನ ಹಿಡುವಳಿದಾರರು ಅಪೇಕ್ಷಿಸುವುದರಲ್ಲಿ ಮುಖ್ಯ ಅಂಶಗಳೇನೆಂದರೆ ಭೂಮಿಯ ಒಡೆತನ ಸಂಪೂರ್ಣ ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು ಮತ್ತು ಇದರಿಂದ ಬರುವ ಉತ್ಪತ್ತಿಯನ್ನು ಹೆಚ್ಚಿಸುವುದು. ವರ್ಷದ ಎಲ್ಲ ತಿಂಗಳುಗಳಲ್ಲೂ ಕೆಲಸ ಸಿಗಬೇಕೆಂದೂ ಕೆಲಸಕ್ಕನುಗುಣವಾಗಿ ಸಂಬಳ ಸಿಗಬೇಕೆಂದೂ ಕೆಲಸಗಾರರು ಹಾರೈಸುತ್ತಾರೆ. ಕೈಗಾರಿಕೆಯ ಕೆಲಸಗಾರರಂತೆ ಗ್ರಾಮೀಣ ವ್ಯವಸಾಯದ ಕೆಲಸಗಾರರಿಗೆ ಕೂಡ ಅಪೇಕ್ಷೆಪಟ್ಟಾಗ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗಿ ಅಲ್ಲಿ ವ್ಯವಸಾಯಕಾರ್ಯ ಮಾಡುವ ಸಂದರ್ಭವನ್ನು ಕಾರ್ಮಿಕರ ಕಾರ್ಪೊರೇಶನ್ ಒದಗಿಸಿಕೊಡಬೇಕಾಗಿದೆ. ಹಿಡುವಳಿದಾರರು ತಮಗೆ ಕೆಲಸಗಾರರ ಅಗತ್ಯ ಬಿದ್ದಾಗ ಇಂಥ ಕಾರ್ಮಿಕರ ಸಂಘಗಳನ್ನು ಕೇಳಿಕೊಂಡು ಬೇಕಾದ ಕೆಲಸಗಾರರನ್ನು ಪಡೆಯುವ ಆಸ್ಪದವನ್ನೂ ಕಲ್ಪಿಸಬೇಕು. ಈ ಕೆಲಸಗಾರರಿಗೆ ಆಧುನಿಕ ಯಂತ್ರಸಲಕರಣೆಗಳನ್ನುಪಯೋಗಿಸಿ ಆಧುನಿಕ ಬೇಸಾಯಮಾಡಬಲ್ಲ ತರಬೇತು ಇರುವುದು ಅವಶ್ಯಕ.

ನಮ್ಮ ಸರ್ಕಾರಕ್ಕೆ ಬೇಸಾಯಮಾಡಲು ಬೇಕಾದ ಸಿಬ್ಬಂದಿಯವರು ಸಿಗುತ್ತಾರೆ, ವಿಜ್ಞಾನಿಗಳು ಸಿಗುತ್ತಾರೆ; ಬಂಡವಾಳವಿದೆ; ಅದು ವ್ಯಾಪಕವಾಗಿ ವ್ಯವಸಾಯ ಕಾರ್ಯವನ್ನೂ ಕೈಗೊಳ್ಳಬಹುದಾಗಿದೆ. ಉಳುವವನೇ ಹೊಲದೊಡೆನಾಗಬೇಕೆಂಬ ತತ್ವ ಸಮಾಜವಾದದ ದೃಷ್ಟಿಯಲ್ಲಿ ಶ್ರೇಷ್ಠವಾಗಿರಬಹುದು. ಆದರೆ ಉಳುವವನಿಗೆ ಹೊಲದೊಡೆತನ ಕೊಡುವುದರಿಂದ ಮಾತ್ರ ಸಾಗುವಳಿಯ ಸಮಸ್ಯೆಗಳು ತಮ್ಮಷ್ಟಕ್ಕೆ ಪರಿಹಾರವಾಗುತ್ತವೆಂದು ತಿಳಿದರೆ ಅದು ವಾಸ್ತವಿಕತೆಗೆ ದೂರವಾದ ವಿಚಾರವಾಗುತ್ತದೆ. ನೈಜವಾದ ಅಭಿವೃದ್ಧಿಯಾಗಬೇಕಾದರೆ ಹೊಲದ ಒಡೆತನದಲ್ಲಿ ಬದಲಾವಣೆಯಾದ ಅನಂತರವೂ ವ್ಯವಸಾಯ ಕ್ರಮದಲ್ಲಿ, ಉಪಯೋಗಿಸುವ ಸಲಕರಣೆಗಳಲ್ಲಿ ಮತ್ತು ಮಾರಾಟದಲ್ಲಿ ಸುಧಾರಣೆಯಾಗಬೇಕು.

(ಸಾಭಾರ: ಮಾನವಿಕ ಕರ್ಣಾಟಕ)

ಕನ್‌ಫ್ಯೂಷಿಯಸ್ ಹಾಗೂ ಚೀನೀ ಸಾಹಿತ್ಯ

-ಶಿವರಾಮಯ್ಯ

ಚೀನೀ ಗದ್ಯ ಸಾಹಿತ್ಯವು ಚೀನೀ ಕಾವ್ಯದಷ್ಟೇ ಹಳೆಯದು. ಕ್ರಿ. ಪೂ. ೬-೩ರವರೆಗೆ ಪ್ರಖ್ಯಾತ ದಾರ್ಶನಿಕರು ಕಾಣಿಸಿಕೊಂಡರಷ್ಟೆ. ಅವರೆಲ್ಲ ತಮ್ಮ ತಮ್ಮ ಸಿದ್ಧಾಂತಗಳನ್ನು ಗದ್ಯದ ಮೂಲಕ ಹೇಳಿ ಹೋಗಿದ್ದಾರೆ. ಬೆನ್(ಕ್ರಿ. ಪೂ. ೧೪೫ ?) ರಚಿಸಿದ ಷಿಹಿ-ಚೀ ಎಂಬ ಗದ್ಯ ಕೃತಿ ಚೀನೀ ಸಾಹಿತ್ಯ ಚರಿತ್ರೆಯಲ್ಲೊಂದು ಮೈಲಿಗಲ್ಲು. ಇದರಲ್ಲಿ ಆ ಕಾಲದ ಸಾಮಾಜಿಕ, ಆರ್ಥಿಕ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳನ್ನು ಸರಳ ಸುಂದರ ಲಲಿತ ಶೈಲಿಯಲ್ಲಿ ಚಿತ್ರಿಸಲಾಗಿದೆ. ಆದರೆ ಈ ಗದ್ಯ ಶೈಲಿ ಬಹು ಬೇಗ ಅದೃಶ್ಯವಾಗಿ, ಗದ್ಯದಲ್ಲಿಯೂ ಶಬ್ದಾಡಂಬರದ ಶೈಲಿ ಕಾಣಿಸಿಕೊಂಡಿತು. ಆದರೆ ಟಾಂಗ್ ಸಂತತಿ ಕಾಲದಲ್ಲಿದ್ದ ಹಾನ್-ಯೂ ಎಂಬ ಲೇಖಕ ಈ ಶಬ್ದಾಡಂಬರದ ಚಪಲವನ್ನು ಖಂಡಿಸಿ ಮತ್ತೆ ಪ್ರಾಚೀನವಾದ ಸರಳ ಸುಂದರ ಶೈಲಿಯನ್ನು ಪ್ರಾರಂಭಿಸಿದ. ಕನ್‌ಫ್ಯೂಷಿಯಸ್ ಕಾಲದ ಸಮಾಜಪರ ಚಿಂತನ ಶೈಲಿಯತ್ತ ಲೇಖಕರ ಗಮನ ಹರಿಯಿತು. ಆದರೂ ಸಂಪ್ರದಾಯಶರಣರಾದ ಮಿಂಗ್(೧೩೬೮-೧೬೪೪) ಮತ್ತು ಚಿಂಗ್(೧೬೧೪-೧೯೧೧) ಸಂತತಿಗಳ ಕಾಲದ ಲೇಖಕರು ಮತ್ತೆ ಗದ್ಯದಲ್ಲಿ ಆಡಂಬರದ ಶೈಲಿಯನ್ನೇ ಜಾರಿಗೆ ತಂದರು. ಸರ್ಕಾರ ನಡೆಸುತ್ತಿದ್ದ ಪರೀಕ್ಷೆಗಳಲ್ಲಿ ಪ-ಕು-ವೆನ್ ಅಥವಾ ಎಂಟು ಪಾದದ ಪ್ರಬಂಧ ಎಂಬ ವಿಶಿಷ್ಟ ಗದ್ಯ ಶೈಲಿಯನ್ನು ವಿಧಿಸಲಾಯಿತು. ಇಂಥ ಅಹಿತಕರ ವಾತಾವರಣದಲ್ಲಿಯೂ ವೆನ್-ಷಿನ್‌ಟಯೊ-ಉಂಗ್ ಅಥವಾ ಸಾಹಿತ್ಯದ ಹೃದಯ ಗೂಡಿನಿಂದ ಡ್ರೇಗನ್ ಪೆಡಂಭೂತವನ್ನು ಹೊತ್ತು ಬರುವುದು ಎಂಬ ವಿಮರ್ಶಾ ಗ್ರಂಥವನ್ನು ಲಿಯುಷಿಯೆನ್(ಕ್ರಿ. ಶ.೪೬೫?) ಎಂಬ ವಿಮರ್ಶಕ ರಚಿಸಿರುತ್ತಾನೆ. ಟಾಂಗ್ ಸಂತತಿಯ ಕಾಲದಲ್ಲಿ ಬುದ್ಧನ ಆಧ್ಯಾತ್ಮ ಬೋಧನೆಗಾಗಿ ಬೌದ್ಧ ಮತ ಪ್ರಚಾರಕರು ಷಿಯೆನ್- ವೆನ್ ಅಥವಾ ಪರಿವರ್ತಿತ ಸಾಹಿತ್ಯವೆಂಬ ಶೈಲಿಯನ್ನು ಕಂಡುಹಿಡಿದರು. ಇದು ಸಹಜವಾಗಿಯೇ ಜನರ ಆಡುಭಾಷೆಗೆ ಹತ್ತಿರವಿದ್ದು ಜನರಿಗೆ ಸುಲಭವಾಗಿ ಅರ್ಥವಾಗುವಂತಿತ್ತು. ಮಿಂಗ್ ಮತ್ತು ಚಿಂಗ್ ಸಂತತಿಗಳ ಕಾಲದಲ್ಲಿ ಅಂದರೆ ೧೪ನೇ ಶತಮಾನದಿಂದಾಚೆಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾದಂಬರಿ ಉನ್ನತ ಸ್ಥಾನವನ್ನು ಪಡೆದುಕೊಂಡಿತು. ಆದರೆ ಸಂಪ್ರದಾಯಬದ್ಧ ಪಂಡಿತರು ೯ನೇ ಶತಮಾನದಲ್ಲಿ ಇಂಥ ಶೈಲಿಯನ್ನು ನಿಲ್ಲಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಅಂದರೆ ಕನ್‌ಫ್ಯೂಷಿಯಸ್ ಶಿಕ್ಷಣ ಪದ್ಧತಿಯು ಚೀನೀ ಸಾಹಿತ್ಯವು ವಿವಿಧ ಮುಖಗಳಲ್ಲಿ ಆಡುನುಡಿಗೆ ಹತ್ತಿರವಾಗದಂತೆ

ತಡೆಯನ್ನು ನಿರ್ಮಿಸಲು ಪ್ರಯತ್ನಿಸಿತ್ತೆಂದು ಹೇಳಬಹುದು. ಆದ್ದರಿಂದಲೇ ಟಾಂಗ್ ಸಂತತಿಯ ಕಾವ್ಯದ ಸುವರ್ಣ ಯುಗದಿಂದ ಈಚೆಗೆ ಚೀನೀ ಕಾವ್ಯದಲ್ಲಿ ಸಾಹಿತ್ಯದ ಸೊಬಗು ಕಡಿಮೆಯಾಗುತ್ತಾ ಬಂದಿತು. ಭಾಷೆಯ ಬಳಕೆಯ ಸಾಧ್ಯತೆಗೆ ಸಂಪ್ರದಾಯ ಶರಣ ಪಂಡಿತರು ಒಡ್ಡಿದ ಒಡ್ಡು ಇದಕ್ಕೆ ಕಾರಣವಾಯಿತು. ಒಂದು ಕಾಲದಲ್ಲಿ ಎಲ್ಲಾ ಭಾಷಾ ಸಾಹಿತ್ಯಗಳೂ ಇಂಥ ಅಡಚಣೆಯನ್ನು ಎದುರಿಸಬೇಕಾಗಿ ಬಂದುದು ಇತರ ಭಾಷಾಸಾಹಿತ್ಯ ಚರಿತ್ರೆಗಳನ್ನು ಅಧ್ಯಯನ ಮಾಡಿದರೆ ವ್ಯಕ್ತವಾಗುತ್ತದೆ. ಆದ್ದರಿಂದ ಚೀನೀ ಕಾವ್ಯವೂ ಇಂಥ ಅಪವಾದಗಳಿಂದ ದೂರ ಉಳಿಯಲಿಲ್ಲ. ಮತ್ತು ಅದು ಸುಮಾರು ೭೦೦ವರ್ಷಗಳಷ್ಟು ದೀರ್ಘಕಾಲ, ಕಾವ್ಯ ಈ ಪರಿಸ್ಥಿತಿಯಲ್ಲಿಯೇ ಇರಬೇಕಾಯಿತಲ್ಲ ಎಂಬುದು ಗಮನಾರ್ಹವಾದ ಅಂಶ. ಮಿಂಗ್ ಸಾಮ್ರಾಟರ ಕಾಲದಲ್ಲಿ ವ್ಯಾಸಂಗ ವಿಷಯಗಳೂ, ಅವುಗಳ ವ್ಯವಸ್ಥೆಯೂ ಜಟಿಲವಾಗುತ್ತ ಬಂದವು. ಜೂಷೀ ಪಂಡಿತ ಕನ್‌ಫ್ಯೂಷಿಯಸ್‌ನ ತತ್ತ್ವ ಸಿದ್ಧಾಂತಗಳನ್ನು ಕುರಿತು ರಚಿಸಿದ ವ್ಯಾಖ್ಯಾನ ೧೨ನೇ ಶತಮಾನದ ಕೊನೆ ಕೊನೆಗೆ ದೇಶಾದ್ಯಂತ ಪ್ರಚಾರಕ್ಕೆ ಬಂತು. ಅದನ್ನೇ ವಿದ್ಯಾಪೀಠಗಳೆಲ್ಲ ಅಂಗೀಕರಿಸಿದ್ದವು. ಪರೀಕ್ಷೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಸ್ವೋಪಜ್ಞತೆಯನ್ನು ಪ್ರದರ್ಶಿಸಲು ಅವಕಾಶವಿರಲಿಲ್ಲ. ಆದ್ದರಿಂದ ಶಿಕ್ಷಣ ಸಂಸ್ಥೆಗಳೆಲ್ಲ ಜೂಷೀಯ ವ್ಯಾಖ್ಯಾನಗಳನ್ನು ಮಕ್ಕೀಕಾಮಕ್ಕಿಯಾಗಿ ಅಧ್ಯಯನ ಮಾಡುತ್ತಿದ್ದು ಜ್ಞಾನರಾಜ್ಯದ ಬೆಳವಣಿಗೆಗೆ ನಮ್ಯತೆ ಇಲ್ಲವಾಗುತ್ತಾ ಬಂತು. ವಿದ್ಯಾಪೀಠಗಳು ಪ್ರಾಚೀನ ಪಠ್ಯಗಳ ಕಸರತ್ತಿನ ಕೇಂದ್ರಗಳಾಗತ್ತಾ ಬಂದವು. ಇದನ್ನು ಚೀನಾದ ಜ್ಞಾನರಾಜ್ಯದ ಕತ್ತಲ ಯುಗವೆಂದು ಕರೆಯಬಹುದು.

ಹೀಗಾಗಿ ೧೯೧೭ರ ವರೆಗಿನ ಚೀನೀ ಸಾಹಿತ್ಯವೆಲ್ಲ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನವಾದ ಚೀನೀ ಭಾಷೆಯಲ್ಲಿಯೆ ಇರುತ್ತಿತ್ತು. ಭಾಷೆ ಮತ್ತು ಅರಿವು ಒಟ್ಟೊಟ್ಟಿಗೆ ಸಾಗುವುದರಿಂದ ಕಲಿತವರೂ ಸಂಪ್ರದಾಯ ಚೌಕಟ್ಟಿನ ಆಚೆಗೆ ಕಣ್ಣೆತ್ತಿ ನೋಡಲು ಸಮರ್ಥರಾಗಲಿಲ್ಲ. ಆದ್ದರಿಂದ ಭಾಷಾ ವಿಕಾಸದ ಸಾಧ್ಯತೆಯ ಕಿಟಕಿಗಳು ತೆರೆಯಲೇ ಇಲ್ಲ. ಇದರಿಂದ ಕಾವ್ಯದ ಬೆಳವಣಿಗೆಯೂ ಭಾಷಾ ವಿಕಾಸವೂ ಒಟ್ಟೊಟ್ಟಿಗೆ ಸ್ಥಗಿತವಾದವು. ಆಡು ಭಾಷೆಗೂ ಗ್ರಾಂಥಿಕ ಭಾಷೆಗೂ ಅಜಗಜಾಂತರ ದೂರ ಏರ್ಪಟ್ಟಿತು. ಭಾಷೆ, ಸಾಮಾನ್ಯನು ಪ್ರವೇಶಿಸಲು ಸಾಧ್ಯವಾಗದ ಸೀಗೆಮೆಳೆಯಂತೆ ಇದ್ದು ಆಜೀವಪರ್ಯಂತ ಅಭ್ಯಾಸ ಮಾಡಿದ ಪಂಡಿತನಿಗೆ ಮಾತ್ರ ಓದಿ ಅದರ ಕಾವ್ಯಾಸ್ವಾದನೆಯನ್ನು ಮಾಡಲು ಸಾಧ್ಯವಿತ್ತು. ಇಂಥ ಪರಿಸ್ಥಿತಿಯಲ್ಲಿ, ಅಮೇರಿಕದಲ್ಲಿ ವಿದ್ಯಾಭ್ಯಾಸ ಮಾಡಿ ಬಂದ ಚೀನೀ ಲೇಖಕ ಡಾ॥ ಹುಷಿ ಚೀನಾಕ್ಕೆ ಹಿಂದಿರುಗಿ ತಾಯ್ನಾಡಿನ ಸಾಹಿತ್ಯ ರಂಗದಲ್ಲಿ ಕ್ರಾಂತಿಯನ್ನು ಎಬ್ಬಿಸಿದ. ಈತ ಪ್ರಾರಂಭಿಸಿದ ಕ್ರಾಂತಿಯ ಫಲವಾಗಿ ಹುಟ್ಟಿದ ಹೊಸ ಸಂಪ್ರದಾಯದಲ್ಲಿ ಅತ್ಯಂತ ಪ್ರಮುಖ ಸಾಹಿತಿ ಲೂ-ಷ್ಯುನ್ (೧೮೮೧-

೧೯೩೬). ಕನ್‌ಫ್ಯೂಷಿಯಸ್ ಹೇಗೆ ತನಗೆ ದೊರೆತ ಸಾಹಿತ್ಯವನ್ನು ಸಂಕಲಿಸಿ, ವ್ಯವಸ್ಥಾಪಿಸಿ, ವ್ಯಾಖ್ಯಾನ ಮಾಡಿ ಅದಕ್ಕೊಂದು ಪ್ರಾಚೀನ ಪರಂಪರೆಯ ಮಾರ್ಗವನ್ನು ಹಾಕಿಕೊಟ್ಟನೋ ಹಾಗೆಯೆ ಲೂ-ಷ್ಯುನ್ ಆಧುನಿಕ ಚೀನೀ ಸಾಹಿತ್ಯದ ಪ್ರವರ್ತಕನೆಂದು ಪ್ರಸಿದ್ಧವಾಗಿದ್ದಾನೆ. ೧೯೧೯ರ ಮೇ ನಾಲ್ಕರಿಂದ ಚೀನೀ ಭಾಷಾ ಸಾಹಿತ್ಯ ಸಂದರ್ಭದಲ್ಲಿ ಪರಂಪರೆಯ ಮಾರ್ಗವನ್ನು ಮೆಟ್ಟಿ ಪ್ರಗತಿಶೀಲ ಚಳುವಳಿ ಆರಂಭವಾಯಿತು.

ಪ್ರಾಚೀನ ಚೀನೀ ಸಾಹಿತ್ಯವನ್ನು ಹೀಗೆ ಆಮೂಲಾಗ್ರವಾಗಿ ಸಮೀಕ್ಷೆ ಮಾಡಿದಾಗ ಒಂದು ಅಂಶ ಗಮನ ಸೆಳೆಯುತ್ತದೆ. ಇಷ್ಟು ದೀರ್ಘ ಪರಂಪರೆಯುಳ್ಳ ಚೀನೀ ಸಾಹಿತ್ಯದಲ್ಲಿ ಒಂದಾದರೂ ಮಹಾಕಾವ್ಯ ರಚನೆಯಾಗಲಿಲ್ಲ ಏಕೆ ಎಂಬುದು. ಪ್ರಾಚೀನ ಚೀನಾದಲ್ಲಿ ಲಾವೊತ್ಸೆ, ಕನ್‌ಫ್ಯೂಷಿಯಸ್ ಅನಂತರ ಬೌದ್ಧ ತತ್ವ ಸಿದ್ಧಾಂತಗಳು ಪ್ರಚಾರಕ್ಕೆ ಬಂದುವಷ್ಟೆ. ಆದರೆ ಇವು ಯಾವುವೂ ತಾ ಹೆಚ್ಚು ನಾ ಹೆಚ್ಚು ಎಂದು ತಮ್ಮ ತಮ್ಮ ಮತಧರ್ಮ ಸಂಸ್ಥಾಪನೆಗೆ, ಪ್ರಚಾರಕ್ಕೆ ಸಾಹಿತ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಳ್ಳಲಿಲ್ಲ. ಆದ್ದರಿಂದ ವಿಶ್ವದ ಇತರೆಡೆಗಳಲ್ಲಿ ಉದಾ: ಭಾರತ ಮತ್ತು ಯೂರೋಪ್, ಮುಂತಾದ ಕಡೆ ಹುಟ್ಟಿದಂತೆ ಮತಧರ್ಮದ ಚೌಕಟ್ಟಿನಲ್ಲಿ ಮಹಾಕಾವ್ಯಗಳು ಮೂಡಿಬರಲಿಲ್ಲವೇನೋ! ಹಾಗೆಂದ ಮಾತ್ರಕ್ಕೆ ಚೀನೀ ಸಾಹಿತ್ಯ ಸಾಮಾನ್ಯವಾದುದೇನಲ್ಲ. ಮಹಾಕಾವ್ಯದ ಅಂಶವನ್ನುಳ್ಳ ವಿಪುಲವಾದ ಭಾವಗೀತ ಕಾವ್ಯ ಸೃಷ್ಟಿಯಾಗಿದೆ. ಇದಕ್ಕೆ ಕನ್‌ಫ್ಯೂಷಿಯಸ್‌ನ ಶಿಕ್ಷಣಪದ್ಧತಿಯ ಆಧಾರದ ಮೇಲೆ ಚೀನೀ ಸಾಹಿತ್ಯವು ವಿಕಾಸವಾದದ್ದೂ ಒಂದು ಪ್ರಮುಖ ಕಾರಣವೆನ್ನಬಹುದು. ಮೊದಲನೆಯದಾಗಿ, ಕನ್‌ಫ್ಯೂಷಿಯಸ್ ಬೋಧನಾ ವಿಧಾನದಲ್ಲಿ ಗುರು ಶಿಷ್ಯರ ಸಂಬಂಧ ಆತ್ಮೀಯ ಸಂಬಂಧವಾಗಿತ್ತು, ದಂಡಾತ್ಮಕವಾಗಿರಲಿಲ್ಲ. ಸುಖೀ ಸಮಾಜ ಸ್ಥಾಪನೆಗೆ ಸರಿಯಾದ ಶಿಕ್ಷಣವೇ ಅಡಿಗಲ್ಲು ಎಂಬುದನ್ನು ಅವನು ಪ್ರಯೋಗದಲ್ಲಿ ಕಂಡುಕೊಂಡ. ತನ್ನ ಸಾಧನೆಯನ್ನು ಆತ್ಮೀಯ ಭಾಷೆಯಲ್ಲಿ ಬಿಡಿಸಿ ಹೇಳಿದ. ತಾಯ್ನಾಡಿನ ಬಗೆಗೆ ಅವನಲ್ಲಿದ್ದ ಕಳಕಳಿ ಭಾವನೆ, ಕಾಲಕಾಲದಲ್ಲಿ ಸೃಷ್ಟಿಯಾದ ಭಾವಗೀತ ಕಾವ್ಯದ ಮೇಲೂ ಪ್ರಭಾವ ಬೀರಿದೆ.

ಕನ್‌ಫ್ಯೂಷಿಯಸ್‌ನ ಬೋಧನೆಯಲ್ಲಿ ಸಾಮಾಜಿಕ ಬದ್ಧತೆ ಇದ್ದ ಕಾರಣ ಅವನ ಶಿಕ್ಷಣ ಪದ್ಧತಿಯಲ್ಲಿ ಬೆಳೆದುಬಂದ ಕವಿಗಳ ಮೇಲೂ ಅದು ಪ್ರಭಾವ ಬೀರಿತು. ಸಾಮಾಜಿಕ ಬದ್ಧತೆ ಹಾಗೂ ನಾಡಿನ ಸೌಂದರ್ಯ ವರ್ಣನೆ ಚೀನೀ ಕಾವ್ಯದ ಎರಡು ಮುಖಗಳು. ಇದನ್ನು ಕನ್‌ಫ್ಯೂಷಿಯಸನಿಗಿಂತಲೂ ಹಿಂದೆ ಇದ್ದ ಅನಾಮಿಕ ಕವಿಗಳ ಕಾವ್ಯ ರಚನೆಯಲ್ಲೂ ಕಾಣಬಹುದಾಗಿದೆ. ಇದನ್ನೆಲ್ಲ ಸಂಗ್ರಹಿಸಿಕೊಟ್ಟ ಕನ್‌ಫ್ಯೂಷಿಯಸ್ ಚೀನಾದ ಪ್ರಾಚೀನ ಪರಂಪರೆಯನ್ನು ಉಳಿಸಿ, ಮುಂದಿನ ಪೀಳಿಗೆಗೆ ಬಳುವಳಿಯನ್ನಾಗಿ ಬಿಟ್ಟ. ಹೀಗೆ ಕನ್‌ಫ್ಯೂಷಿಯಸ್‌ನ ಕಾವ್ಯ

ಸೂತ್ರಗಳು ಅವಿಚ್ಛಿನ್ನವಾಗಿ ಚೀನೀ ಸಾಹಿತ್ಯದ ಮೇಲೆ ಪ್ರಭಾವ ಮುದ್ರೆಯನ್ನು ಒತ್ತಿವೆ ಎಂದು ಧಾರಾಳವಾಗಿ ಹೇಳಬಹುದು. ಅಲ್ಲದೆ ಮಹಾಕಾವ್ಯ ರಚನೆಯಾಗದೆ ಇರುವುದಕ್ಕೂ ಕನ್‌ಫ್ಯೂಷಿಯಸ್‌ನ ಭಾವಗೀತ ಸ್ವರೂಪದ ಕಾವ್ಯ ಸಮರ್ಥನೆಯೇ ಒಂದು ಕಾರಣವಾಗಿರಬಹುದು. ಹೀಗಾಗಿ ಕನ್‌ಫ್ಯೂಷಿಯಸ್‌ನ ಕಲಾ ಸಿದ್ಧಾಂತ ತನ್ನ ಪರಿಪೂರ್ಣತೆಯನ್ನು ಸಾಧಿಸಿ ತದನಂತರ ಸ್ಥಗಿತಗೊಂಡಿರಬೇಕು. ಆದರೆ ಇವನ ಪರಂಪರೆಯ ಮಾರ್ಗವನ್ನು ಮುರಿದು ಹೊಸದೊಂದು ಕಾವ್ಯ ಮಾರ್ಗವನ್ನು ಕಂಡುಕೊಳ್ಳುವ ಧಾಷ್ಟ್ರ್ಯವನ್ನು ಯಾವ ಪ್ರಾಚೀನ ಕವಿಯೂ ಮಾಡಲಿಲ್ಲ. ಆದ್ದರಿಂದ ಸುಮಾರು ೭೦೦ ವರ್ಷಗಳ ಬರಡುಯುಗದ ನಿರ್ಮಾಣಕ್ಕೆ ಅಪ್ರತ್ಯಕ್ಷವಾಗಿ ಕನ್‌ಫ್ಯೂಷಿಯಸ್‌ನೇ ಕಾರಣವೆನ್ನಬಹುದು(೧೩೦೦-೧೯೦೦)

ಇಂದು ಚೀನಾದಲ್ಲಿ ಕನ್‌ಫ್ಯೂಷಿಯಸ್, ಲಾವೊತ್ಸೆ ಹಾಗೂ ಬೌದ್ಧ ತತ್ವಗಳು ಹಿಮ್ಮೆಟ್ಟಿವೆ. ಕಾರ್ಲ್‌ಮಾರ್ಕ್ಸ್‌ನ ಭೌತವೈಚಾರಿಕ ತತ್ವದ ದೃಷ್ಟಿಯಿಂದ ಮಾವೋ ಚೀನೀತತ್ವದ ಬೆಳವಣಿಗೆಯನ್ನು ವಿಮರ್ಶಿಸಿರುತ್ತಾನೆ. ಇದರಿಂದ ಆಧುನಿಕ ಕಮ್ಯುನಿಸ್ಟ್ ಚೀನಾದ ಸಾಹಿತ್ಯವೂ ಪ್ರಭಾವಿತವಾಗಿದೆ. ಯಾವುದಾದರೂ ಒಂದು ಚಳವಳಿ ಅದರ ಅಂತಿಮ ಘಟ್ಟವನ್ನು ಮುಟ್ಟಿದಾಗ, ಅದು ಅದಕ್ಕೆ ವ್ಯತಿರಿಕ್ತವಾದ ಚಳವಳಿಗೆ ದಾರಿ ಮಾಡಿಕೊಡುತ್ತದೆ. ಹೀಗೆ ಪರಸ್ಪರ ವಿರೋಧಿ ಚಳವಳಿಗಳು ಒಂದನ್ನೊಂದು ಪೂರ್ಣಗೊಳಿಸುತ್ತವೆ. ತಿಯಾನ್‌ಮನ್ ಸರ್ಕಲ್ಲಿನಲ್ಲಿ ನಡೆದ ವಿದ್ಯಾರ್ಥಿಗಳ ಹತ್ಯಾಕಾಂಡ ಮುಂದಿನ ಬದಲಾವಣೆಗೆ ಸೂಚನೆಯಾಗಿದೆ. ಪ್ರಜಾಪ್ರಭುತ್ವಪರ ಚಳವಳಿಯನ್ನು ಕಮ್ಯೂನಿಸ್ಟ್ ಚೀನಾ ಸದ್ಯಕ್ಕೆ ಹತ್ತಿಕ್ಕಿದರೂ ಮುಂದೆ ಅದು ಮೇಲಿನ ಮಾತನ್ನು ನಿಜಗೊಳಿಸುವ ದಿಕ್ಕಿನಲ್ಲಿ ಸಾಗುವಂತಿದೆ. ಪ್ರಭುತ್ವ ಬದಲಾವಣೆಗೊಂಡರೆ ಅದರ ಪ್ರಭಾವ ಸಹಜವಾಗಿಯೇ ಆ ದೇಶದ ಕಲೆ ಸಾಹಿತ್ಯದ ಮೇಲೂ ಆಗುವ ಸಂಭವ ಉಂಟಷ್ಟೆ. ಆ ಪ್ರಕಾರವಾಗಿ ಕನ್‌ಫ್ಯೂಷಿಯಸ್, ಲಾವೊತ್ಸೆ ಮತ್ತು ಬೌದ್ಧ ಧರ್ಮಗಳ ಸುಧಾರಿತ ಸಿದ್ಧಾಂತಗಳು ಮತ್ತೆ ಚೀನಾದಲ್ಲಿ ಚಾಲನೆಗೆ ಬಂದರೂ ಬರಬಹುದು. ಆಗ ಬದಲಾದ ರಾಜಕೀಯ ಹಾಗೂ ಸಾಮಾಜಿಕ ಧೋರಣೆಗಳಿಗನುಗುಣವಾದ ಸಾಹಿತ್ಯ ರಚನೆ ಆದರೂ ಆಗಬಹುದು. ಇಲ್ಲಿಗೆ ಚೀನೀ ಸಾಹಿತ್ಯದ ವೃತ್ತ ಒಂದು ಸುತ್ತು ಉರುಳಿದಂತಾಗುತ್ತದೆ.

ಕೊನೆಯದಾಗಿ ಒಂದು ಮಾತು, ಕನ್‌ಫ್ಯೂಷಿಯಸ್‌ನ ಯಾವ ಬೋಧನಾ ಸಿದ್ಧಾಂತಗಳ ಆಶಯದ ಮೇಲೆ ರೂಪುಗೊಂಡ ಕಾವ್ಯ ನಿಯಮಗಳು ಪ್ರಾಚೀನ ಚೀನೀ ಕಾವ್ಯ ರಚನೆಗೆ ಪ್ರೇರಣೆ ಪ್ರಚೋದನೆ ನೀಡಿ ಬೆಳೆಸಿದವೋ ಅದೇ ಕಾವ್ಯ ನಿಯಮಗಳು ಚೀನೀ ಸಾಹಿತ್ಯಕ್ಕೆ ಕ್ರಮೇಣ ಮಾರಕವಾಗಿ ಪರಿಣಮಿಸಿ ಕಾವ್ಯದ ಸ್ಥಗಿತತೆಗೂ ಕಾರಣವಾಯಿತು ಎಂದು ಹೇಳದೇ ವಿಧಿಯಿಲ್ಲ.

ಕ್ರಿ. ಪೂ. ೨೨೧ರಿಂದ ೨೦೭ರಲ್ಲಿ ಚೀನೀ ಸಾಮ್ರಾಜ್ಯದ ಮೊದಲ ಚಕ್ರವರ್ತಿ ಚಿನ್(ಇವನ ಹೆಸರಿನಿಂದ ಚೀನಾ ಹೆಸರು ಬಂದಿದೆಯಂತೆ)ಸ್ವಾರ್ಥಿ

ಮತ್ತು ಮಹತ್ವಾಕಾಂಕ್ಷಿ. ತನ್ನ ಆಳ್ವಿಕೆಯನ್ನು ಅಜರಾಮರವಾಗಿ ಉಳಿಸಬೇಕೆಂಬ ಏಕಮಾತ್ರ ಉದ್ದೇಶದಿಂದ ಹಿಂದಿನವರ ಯಾರ ಹೆಸರೂ ಉಳಿಯದಂತೆ ಮಾಡಬೇಕೆಂದು ಪ್ರಾಚೀನ ದಾಖಲೆಗಳನ್ನೆಲ್ಲ ಅಳಿಸಿಹಾಕಲು ಆಜ್ಞೆ ಮಾಡಿದ. ಈ ಕಾರ್ಯಾಚರಣೆಯಲ್ಲಿ ಕನ್‌ಫ್ಯೂಷಿಯಸ್‌ನ ಗ್ರಂಥಗಳೂ ಸೇರಿ ಎಷ್ಟೋ ನಾಶವಾಗಿ ಹೋದವು. ವಿರೋಧಿಸಿದ ಅನೇಕ ವಿದ್ವಾಂಸರಿಗೆ ಮರಣದಂಡನೆಯನ್ನು ವಿಧಿಸಲಾಯಿತು. ಇಷ್ಟಾದರೂ ಕನ್‌ಫ್ಯೂಷಿಯಸ್‌ನ ಸಾಹಿತ್ಯ ಹೇಗೋ ಉಳಿಯಿತು.

(ಸಾಭಾರ; ಅನಿಕೇತನ)

***

ಸನ್ಮಾನ್ಯರಿಂದ

ವೈಜ್ಞಾನಿಕತೆ + ವೈಚಾರಿಕತೆ= ಐನ್‌ಸ್ಟೈನ್ ಲೇಖನ ಚೆನ್ನಾಗಿ ಮೂಡಿಬಂದಿದೆ. ವಿಜ್ಞಾನ ಮತ್ತು ಧರ್ಮ ಪರಸ್ಪರ ಪೂರಕವಾಗಿದ್ದರೆ ಬದುಕಿನಲ್ಲಿ ಒಂದು ಅರ್ಥವಿರುತ್ತದೆ. ಐನ್‌ಸ್ಟೈನ್‌ರ ಸಾಪೇಕ್ಷತಾ ಸಿದ್ಧಾಂತವನ್ನೇ ಮೂಲವಾಗಿಟ್ಟುಕೊಂಡು ವಿಜ್ಞಾನಿ ಐನ್‌ಸ್ಟೈನ್ ಮತ್ತು ತತ್ವಜ್ಞಾನಿ ವಿನೋಬಾರ ನಡುವೆ ಅಂದರೆ ವಿಜ್ಞಾನ ಮತ್ತು ವೇದಾಂತದ ನಡುವೆ ಇರುವ ಸಾಪೇಕ್ಷತೆಯನ್ನು ಕಂಡುಕೊಂಡಿರುವುದು ಲೇಖಕರ ಕೌಶಲ್ಯವನ್ನು ತೋರಿಸುತ್ತದೆ.

–ಜಿ. ವೈದೇಹಿ. ಮೈಸೂರು.

***

ಪತ್ರಿಕೆ ಉತ್ತಮವಾಗಿ ಮೂಡಿಬರುತ್ತಿದೆ.

–ಹೆಚ್. ಎಸ್. ಬಲರಾಮು. ಮೈಸೂರು.

ಸಿ.ವಿ. ರಾಮನ್ ನೆನಪಿಗೆ

ನಿಚ್ಚಳವಾದ ಸುಸ್ಪಷ್ಟ ಶಬ್ದ ರೇಖೆಗಳು
ಹಿಮಾಲಯದೆತ್ತರಕ್ಕೂ ನಿಂತ ಪಟ್ಟಕದ ಹರಳು
ಶಬ್ದದಲಿ ಬೆಳಕಾಗಿ ಬೆಳಕಿನುದ್ಭೋದದಲಿ
ಹಡೆದು ತಂದದ್ದೆಲ್ಲ ನಮಗೆ ಪರಕೀಯ
ಮನೆಯ ಕೈತೋಟದಲಿ ಬೆಳೆದ ಬಣ್ಣಬಣ್ಣದ ಹೂವು
ಅಲ್ಲಿ ಮೈವಡೆದದ್ದು ವಜ್ರಹೊಳಪು
ಆ ವರ್ಣಗಳ ವಿಭೇದಿಸಿ ನಕ್ಷತ್ರ ಮಾಲಿಕೆಯಲ್ಲಿ
ಕಡೆದ ಮೊಸರಿನ ಬೆಣ್ಣೆ ನಿಶಿತ ಮಾತು
ಗರ್ಭಗುಡಿಯಲಿ ಉರಿವ ಹಣತೆ ತಲೆಗೆ ಕಿರೀಟ
ಸಿದ್ಧಕಳೆ ಮುಚ್ಚಿ ಮರೆಮಾಡಿದ್ದು ಹಳೆಯ ಪೌಳಿ
ನೆಟ್ಟ ಸಸಿಗೆರೆದ ನೀರಿನ ತುಂಬ ಬೆವರು ಹನಿ
ಹಣ್ಣುದುರಿ ಕಾಂತಕ್ಷೇತ್ರದುಡಿಯಲ್ಲಿ ಕುಡಿ ಕುಡಿ
ವಿಜ್ಞಾನದ ಕಮಾನು– ಪ್ರಾಚೀನರ ಪಿಟೀಲು
ನಾದ ಬಂಧದ ಚೌಕ ಅಷ್ಟಭುಜ ಶತಮಾನ
ಅವಧಾನ ಸಾಧನೆಯ ಚೌಕಟ್ಟು ಕಳಚಿ ಬೆಳೆಯುತ್ತ
ಕುಂಡ ಒಡೆದು ರೋಜದ ನೀಲಿ ಗಮಗಮಿಸಿದೆ.

–ವೇಣುಗೋಪಾಲ ಸೊರಬ

(ನೊಬೆಲ್ ಬಹುಮಾನ ಪಡೆದ ಭಾರತೀಯ ವಿಜ್ಞಾನಿ ಸಿ.ವಿ.ರಾಮನ್‌ರ ೭೫ನೇ ವರ್ಷದ ಜನ್ಮದಿನದ ನೆನಪಿನಲ್ಲಿ.)

ಉನ್ನತಿಯಲ್ಲಿರುವ ಸ್ನೇಹಿತನನ್ನು ಭೇಟಿ ಮಾಡುವುದಕ್ಕಿಂತ ಅವನತಿಯಲ್ಲಿರುವ ಸ್ನೇಹಿತನನ್ನು ಭೇಟಿ ಮಾಡುವುದರಲ್ಲಿ ತ್ವರಿತನಾಗಿರು.

–ಪಿಲೊ

ಇಚ್ಛಾನಿಗ್ರಹ

– ಶ್ರೀ ಚಂದ್ರಶೇಖರ ಭಾರತಿ

ಯಾವ ವಸ್ತುವಿಗಾಗಿ ಆಸೆಯಿಂದ ನಾವು ತವಕಿಸುತ್ತೇವೋ ಅದು ದೊರಕಿದಾಗ, ಅಥವಾ ಯಾವುದನ್ನು ಅಸಹನೆಯಿಂದ ಅನುಭವಿಸುತ್ತಿರುತ್ತೇವೋ ಅದರಿಂದ ಬಿಡುಗಡೆ ಹೊಂದಿದಾಗ, ನಾವು ಹರ್ಷಪಡುತ್ತೇವೆ. ಆಸೆಯಿಂದ ತವಕಿಸುತ್ತಿದ್ದಾಗ ಅಥವಾ ಅಸಹನೆಯಿಂದ ಒದ್ದಾಡುತ್ತಿದ್ದಾಗ ನಮ್ಮ ಮನಸ್ಸು ಅಶಾಂತವಾಗಿರುತ್ತದೆ. ಆ ಅಶಾಂತಸ್ಥಿತಿಯನ್ನು ಮೇಲೆ ಹೇಳಿದಂತೆ ಕೊನೆಗೊಳಿಸಿದಾಗ, ಒಂದು ಬಗೆಯ ವಿಶ್ರಾಂತಿ, ಶಾಂತಿ, ತೃಪ್ತಿ, ಸಮಾಧಾನಗಳ ಅನುಭವವಾಗುತ್ತದೆ. ದುರದೃಷ್ಟದಿಂದ ನಮ್ಮ ಮನಸ್ಸನ್ನು ಆಕರ್ಷಿಸುವ ಮತ್ತು ವಿಕರ್ಷಿಸಿ ಅಸ್ವಸ್ಥಗೊಳಿಸುವ ವಸ್ತುಗಳು ಜಗತ್ತಿನಲ್ಲಿ ಹೇರಳವಾಗಿವೆ. ಮನಸ್ಸನ್ನು ಆಕರ್ಷಿಸುವ ಎಲ್ಲಾ ವಸ್ತುಗಳನ್ನು ಪಡೆಯುವುದರಿಂದಾಗಲೀ, ವಿಕರ್ಷಿಸುವ ಎಲ್ಲಾ ವಸ್ತುಗಳನ್ನು ದೂರ ಮಾಡುವುದೋ ಅಥವಾ ತ್ಯಾಜ್ಯ ಮಾಡುವುದರಿಂದಾಗಲೀ, ಮನಸ್ಸಿನ ಅಸ್ವಸ್ಥತೆಯನ್ನು, ಅಶಾಂತಿಯನ್ನು ತೊಲಗಿಸಲು ಸಾಧ್ಯವಿಲ್ಲ;ಮತ್ತು ನಮ್ಮ ಇಚ್ಛೆಬಂದಂತೆ, ಬೇಕಾದುದನ್ನು ಪಡೆಯುವುದೂ ಬೇಡವಾದುದನ್ನು ತೊಲಗಿಸುವುದೂ ನಮ್ಮ ಕೈಯಲ್ಲಿಲ್ಲ. ನಮ್ಮ ಸುಖ ಸಂತೋಷಗಳು ಅವುಗಳನ್ನೇ ಅವಲಂಬಿಸಿದ್ದಲ್ಲಿ ನಾವು ಸಂತೋಷಚಿತ್ತರಾಗಿರಲು ಎಂದಿಗೂ ಸಾಧ್ಯವಿಲ್ಲ.

ಒಬ್ಬ ಮನುಷ್ಯನು ಆರೋಗ್ಯವಾಗಿದ್ದಾನೆ, ಎಂದು ಹೇಳಿದರೆ, ಆತನು ಮೊದಲು ಖಾಯಿಲೆಯಿಂದ ನರಳುತ್ತಿದ್ದನೆಂದೂ ಅನಂತರ ಗುಣಹೊಂದಿದನೆಂದೂ ಊಹಿಸಿಕೊಳ್ಳುವುದು ಅನಾವಶ್ಯಕ. ರೋಗಮುಕ್ತನಾಗಿರುವುದು ಆರೋಗ್ಯವಂತನ ಲಕ್ಷಣವೇ ಹೊರತು, ಮೊದಲು ರೋಗವನ್ನನುಭವಿಸಿ,ಅನಂತರ ಗುಣಹೊಂದಿರಬೇಕಾದ್ದೇನೂ ಅಲ್ಲ. ಹಾಗೆಯೆ ಹರ್ಷವು ದುಃಖದಿಂದ ದೊರಕಿದ ಬಿಡುಗಡೆ. ಹರ್ಷಕ್ಕೆ ಮುನ್ನ ದುಃಖವೊದಗಿಯೇ ಇರಬೇಕೆಂಬ ನಿಯಮವೇನೂ ಇಲ್ಲ. ರೋಗ ಸಂಪರ್ಕವೇ ಇರದ ಆರೋಗ್ಯವು, ರೋಗದನಂತರ ಸಂಭವಿಸಿದ ಆರೋಗ್ಯಕ್ಕಿಂತ ಹೆಚ್ಚು ಸ್ವಾಭಾವಿಕ, ನೈಜ ಮತ್ತು ಸ್ಥಿರವಾದುದು. ಹಾಗೆಯೇ ಚಿತ್ತಕ್ಷೋಭೆಯೇ ಇಲ್ಲದೆ ದೊರಕುವ ಸಮಾಧಾನವು ಚಿತ್ತಕ್ಷೋಭೆಯ ನಂತರ ದೊರಕುವ ಶಾಂತಿ, ಸಮಾಧಾನಕ್ಕಿಂತ ಹೆಚ್ಚು ನೈಸರ್ಗಿಕವೂ ದೃಢವೂ ಮತ್ತು ಅನುಭಾವ್ಯವೂ ಆಗಿರುತ್ತದೆ.

ಮನಃಶಾಂತಿಯನ್ನು ಕದಡುವಂತಹ ಯಾವ ವಿಷಯಕ್ಕೂ ವಶನಾಗದ್ದಿದ್ದಲ್ಲಿ, ಮಾನವನು ಸುಖ ಹೊಂದಬಲ್ಲನು ಮತ್ತು ಸುಖವಾಗಿ ಇರಬಲ್ಲನು. ನಮ್ಮ ಮನಸ್ಸನ್ನಾಕರ್ಷಿಸುವ ಅಥವಾ ಕ್ಷೋಭೆಗೊಳಿಸುವ ಯಾವ ವಸ್ತುವನ್ನೇ ಆಗಲಿ, ಸೃಷ್ಟಿಮಾಡಲು, ತಿದ್ದಲು, ನಿಯಂತ್ರಿಸಲು ಅಥವಾ ನಾಶಗೊಳಿಸಲು ನಮ್ಮಿಂದ ಸಾಧ್ಯವೇ ಇಲ್ಲ. ನಮ್ಮ ಪೂರ್ವಜರು ಸುಖವಾಗಿದ್ದುದಕ್ಕೆ ಕಾರಣ, ಸುಖೋಪಭೋಗ್ಯವಸ್ತುಗಳನ್ನು ಅವರು ಯಥೇಚ್ಛವಾಗಿ ಹೊಂದಿದ್ದುದಾಗಲಿ ಅಥವಾ ಅವರಿಗೆ ದಃಖ ತರುವ ಸಂದರ್ಭಗಳು ಕಡಿಮೆಯಿದ್ದುದಾಗಲಿ ಅಲ್ಲ. ಪ್ರಲೋಭನೆಗಳು ಈ ಜಗತ್ತಿನಲ್ಲಿದ್ದೂ ಸಹ ಮನಸ್ಸನ್ನು ಸಮಾಧಾನ ಸ್ಥಿತಿಯಲ್ಲಿ ಸ್ವಸ್ಥವಾಗಿ ಇಟ್ಟಿದ್ದುದರಿಂದ ಅವರಿಗೆ ವಿರಾಮ, ಅವಕಾಶ, ಶಾಂತಿ ಹರ್ಷಗಳು ದೊರೆಕಿದ್ದುವು. ಅವರು ಸುಖ ಶಾಂತಿಗಾಗಿ ಬಾಹ್ಯೋಪಕರಣಗಳನ್ನು ಅವಲಂಬಿಸಿರಲೂ ಇಲ್ಲ. ಹಾಗೆಯೇ ಬಾಹ್ಯವಸ್ತುಗಳು ತಮಗೆ ಅಸುಖವನ್ನುಂಟುಮಾಡಲು ಅವಕಾಶ ಕೊಡುತ್ತಿರಲೂ ಇಲ್ಲ. ಸುಖಶಾಂತಿ ಬೇಕಾದಲ್ಲಿ ನಾವೂ ಸಹ ಅದೇ ರೀತಿಯ ಮನೋವೃತ್ತಿಯನ್ನು ಅಭ್ಯಸಿಸಬೇಕು.

ಸುಖೋಪಭೋಗಗಳನ್ನು ಮತ್ತು ಅವುಗಳನ್ನು ಗಳಿಸುವ ವಿಧಾನವನ್ನೂ ಕುರಿತು ಬೋಧಿಸುವವರು ಇತರ ದೇಶಗಳಲ್ಲಿಯೂ, ನಮ್ಮ ದೇಶದಲ್ಲಿಯೂ ಸಹ ಹೇರಳವಾಗಿದ್ದಾರೆ. ಆ ಬೋಧನೆಗಳು ನಮ್ಮ ಆಸೆ ಆಕಾಂಕ್ಷೆಗಳನ್ನು ಹೆಚ್ಚಿಸಿ ಮನಸ್ಸನ್ನು ಇನ್ನೂ ಹೆಚ್ಚು ಅಶಾಂತಿಯುತವಾಗಲು ಪ್ರಚೋದಿಸುತ್ತವೆ. ಆಸೆ ಆಕಾಂಕ್ಷೆಗಳ ಪರಿಮಿತಿಯನ್ನು ವಿಸ್ತರಿಸಲು ಆರಂಭಿಸಿದರೆ, ಜಗತ್ತಿನಲ್ಲಿರುವ ವಸ್ತುಗಳೆಲ್ಲಾ ದೊರಕಿದರೂ ಸಾಕೆನಿಸುವುದಿಲ್ಲ. ಇನ್ನೂ ಹೆಚ್ಚು ಹೆಚ್ಚು ಅಗತ್ಯವೆನಿಸಿ, ನಮ್ಮ ಕಾಮನೆಗಳು ಜೀವನದ ಎಲ್ಲಾ ರಂಗಗಳನ್ನೂ ಪ್ರವೇಶಿಸುತ್ತವೆ.ಸಾಮಾನ್ಯವಾಗಿ ಹೆಂಡತಿ, ಮಕ್ಕಳು, ಬಂಧುಗಳು, ಮಿತ್ರರು, ಹೇರಳವಾದ ಸಂಪತ್ತು ಇವುಗಳನ್ನು ಹೊಂದಿರುವುದೇ ಸುಖವೆಂದು ಹಲವರು ಯೋಚಿಸುತ್ತಾರೆ. ಇವಾವುವೂ ಇಲ್ಲದಿದ್ದರೂ ಕೆಲವರು ಹರ್ಷ ಸಂತುಷ್ಟಿಯಿಂದಿರುವುದನ್ನು ನಾವು ನಿತ್ಯವೂ ನೋಡುತ್ತಿಲ್ಲವೆ? ಅಖಂಡ ಭೂಮಂಡಲವನ್ನೇ ಆಳತಕ್ಕ ಚಕ್ರವರ್ತಿಯೂ ಸಹ ದುಃಖಾನುಭವಗಳಿಂದ ತಪ್ಪಿಸಿಕೊಳ್ಳಲಾರ. ಪ್ರಥಮಜಾತನಾದ ಹಿರಣ್ಯಗರ್ಭನೂ ಸಹ ಮಧುಕೈಟಭರೆಂಬ ರಾಕ್ಷಸರಿಂದ ಪೀಡಿಸಲ್ಪಟ್ಟಿದ್ದ. ಸತ್ಕರ್ಮ ಮತ್ತು ದುಷ್ಕರ್ಮ ಫಲಗಳು ವಿವಿಧ ರೀತಿಯಲ್ಲಿ ಸಂಯೋಗವಾಗುವುದೇ ಶರೀರಕ್ಕೆ ಕಾರಣವಾಗುವುದು. ಆದ್ದರಿಂದ ಶರೀರವಿರುವರೆಗೂ ದುಃಖಾನುಭವಗಳಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಅನಿತ್ಯ ವಸ್ತುಗಳಲ್ಲಿನ ಬಯಕೆಯನ್ನು ಅಣಗಿಸಿ ನಮ್ಮ ಅವಕಾಶವನ್ನೂ ಶಕ್ತಿಯನ್ನೂ ಶರೀರ ಸೌಖ್ಯ ಮತ್ತು ದುಃಖಾದಿಗಳ ಎಲ್ಲೆಯನ್ನು ಮೀರದೆ ಆತ್ಮಾನಂದವನ್ನು ಪಡೆಯಲು ವಿನಿಯೋಗಿಸಬೇಕು.

ಅಂತರಾತ್ಮವು ಶರೀರಾದಿಗಳಿಗಿಂತ ಅತೀತವಾದುದೆಂದು ಅರಿತು, ಯಾರು 'ನಾನು' ಮತ್ತು 'ನನ್ನದು' ಎಂಬ ಭಾವನೆಗಳನ್ನು ಮೀರಿದ್ದಾರೋ ಅಂತಹವರಿಗೆ ಮಾತ್ರ ಬಂಧನದಿಂದ ಬಿಡುಗಡೆ ಸಾಧ್ಯವೆಂದು ಶಾಸ್ತ್ರಗಳು ಒತ್ತಿ ಸಾರುತ್ತಿವೆ. ಅಂತಹ ಮುಕ್ತಿ ಅಥವಾ ಬಿಡುಗಡೆಯು ದೇಹಾಭಿಮಾನವನ್ನೂ 'ನಾನು' 'ನನ್ನದು' ಎಂಬುವುಗಳನ್ನು ಪೋಷಿಸುವಾತನಿಗೆ ತೀರ ದೂರವಾಗಿರುತ್ತದೆ. ಪ್ರವಾಹವನ್ನು ದಾಟಲು ಹರಿಗೋಲೆಂದು ನಂಬಿ ಮೊಸಳೆಯ ಬೆನ್ನೇರಿ ಕುಳಿತವರಿಗೆ ಅಂತಹವರನ್ನು ಹೋಲಿಸುತ್ತಾರೆ. ಶ್ರೀ ಶಂಕರಾಚಾರ್ಯರು ಶ್ರದ್ಧಾಪೂರ್ವಕವಾದ ಯಾವ ಪ್ರಯತ್ನಕ್ಕೇ ಆಗಲಿ ಶರೀರವೂ ಬಲಿಷ್ಠವಾಗಿರಬೇಕು, ಆದರೆ ಕೊಬ್ಬಿರಬೇಕಾಗಿಲ್ಲ. ಸಾಕಷ್ಟು ಪೂರ್ವಪುಣ್ಯವಿರದಿದ್ದರೆ ಆರೋಗ್ಯ ದೃಢಕಾಯವನ್ನು ಹೊಂದಿರಲು ನಮ್ಮಿಂದ ಸಾಧ್ಯವಿಲ್ಲ. ಅಭೋಜ್ಯ ಪದಾರ್ಥಗಳನ್ನು ತಿನ್ನದಂತೆ, ದುರಭ್ಯಾಸಗಳಿಂದ ಕೆಡದಂತೆ ಶರೀರವನ್ನು ಕಾಪಾಡಿಕೊಳ್ಳುವುದು ನಮ್ಮಿಂದ ಸಾಧ್ಯ. ಶರೀರವನ್ನು ನಿರ್ಲಕ್ಷಿಸಬೇಕೆಂದು ಶಾಸ್ತ್ರಗಳು ಬೋಧಿಸುವುದಿಲ್ಲ. ಧರ್ಮಾಚರಣೆಗೆ ಶರೀರವು ಪರಿಣಾಮಕಾರಿಯಾದ ಸಲಕರಣೆಯಾಗಬೇಕಾದರೆ, ಅದನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಬೇಕೆಂಬುದಾಗಿ ಶಾಸ್ತ್ರಗಳು ಆದೇಶವನ್ನು ನೀಡುತ್ತವೆ.

ಶಾಸ್ತ್ರದಲ್ಲಿರುವ ಅನೇಕ ಪ್ರಾಯಶ್ಚಿತ್ತಾದಿ ಕರ್ಮಗಳು ಶರೀರ ಶುದ್ಧೀಕರಣಕ್ಕಾಗಿಯೇ ಹೇಳಲ್ಪಟ್ಟವೆ. ಶುದ್ಧಿಗೊಳಿಸಲ್ಪಟ್ಟರೆ ಮತ್ತು ಶುದ್ಧವಾಗಿದ್ದರೆ ಮಾತ್ರ ಶರೀರವು ಧರ್ಮಾಚರಣೆಗೆ ಸಹಕಾರಿಯಾಗುತ್ತದೆ. ಸಾಮಾನ್ಯವಾಗಿ ದಿನಕ್ಕೆರಡುಬಾರಿ ಆಹಾರ, ಕೆಲವು ವಿಶೇಷದಿನಗಳಲ್ಲಿ ಉಪವಾಸವಿರಬೇಕೆಂದು ಶಾಸ್ತ್ರಗಳು ವಿಧಿಸುತ್ತವೆ. ಯಾವ ಆಹಾರವನ್ನು ಉಪಯೋಗಿಸಬಹುದು, ಮತ್ತು ಹೇಗೆ ಯಾವಾಗ ಊಟಮಾಡಬೇಕೆಂಬುದನ್ನು ಸಹ ಶಾಸ್ತ್ರಗಳು ತಿಳಿಸುತ್ತವೆ. ಶಾಸ್ತ್ರಗಳ ಆದೇಶವನ್ನು ಅಲಕ್ಷಿಸಿ, ಕಟ್ಟುಪಾಡುಗಳನ್ನು ಕಿತ್ತೊಗೆದು ಸಿಕ್ಕಿ ಸಿಕ್ಕಿದ ಕಡೆಗಳಲ್ಲಿ ಸಿಕ್ಕಿ ಸಿಕ್ಕಿದುದನೆಲ್ಲಾ ತಿಂದರೆ ಗಡಿಯಾರ ಸರಿಯಾಗಿ ನಡೆಯಲು ಕೀಲಿ ಕೊಡಬೇಕೆಂದು ಇಷ್ಟಬಂದಾಗಲೆಲ್ಲಾ ಕೀಲಿಕೊಡುವವನಿಗಿಂತ ನಾವೇನೂ ಹೆಚ್ಚು ವಿವೇಕಿಗಳೆನಿಸುವುದಿಲ್ಲ. ಇದರಿಂದ ನಮ್ಮ ಶರೀರ ರೋಗಿಷ್ಟವಾಗುವುದಲ್ಲದೆ, ಅತ್ಯಂತ ಸರಳವಾದ ಧರ್ಮಾಚರಣೆಗೂ ಅನರ್ಹವಾಗುತ್ತದೆ.

ನಮ್ಮ ಉಪದೇಶಗಳಿಂದ ಬೇರೆ ಯಾರನ್ನಾದರೂ ಪ್ರಭಾವಿತರನ್ನಾಗಿ ಮಾಡಬೇಕಾದರೆ, ನಮ್ಮ ನುಡಿಯಂತೆ ಚಾಚೂ ತಪ್ಪದೆ ನಾವು ನಡೆದುಕೊಳ್ಳಲೇಬೇಕು. ಈಜಲೂ ಬಾರದವನು ಇತರರನ್ನು ಹೊಳೆದಾಟಿಸಲು ಹೇಗೆ ಸಮರ್ಥನಾದಾನು? ಸಮಾಜವು ವ್ಯಕ್ತಿಗಳ ಸಮೂಹವಲ್ಲದೆ ಬೇರೆಯಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸದರೆ, ಸಮಾಜವು ತಾನಾಗಿಯೇ ಉನ್ನತಿಹೊಂದುವುದು. ವ್ಯಕ್ತಿಯು

ಇನ್ನೊಬ್ಬರನ್ನು ತಿದ್ದಿ, ಸರಿಪಡಿಸುತ್ತೇನೆಂದು ಸುಧಾರಣೆ ಮಾಡಲು ಪ್ರಾರಂಭಿಸಿದರೆ ಆತನ ಯತ್ನ ನಿಷ್ಫಲವಾಗುತ್ತದೆಯಷ್ಟೆ: ಅಲ್ಲದೆ ವಿವಾದಕ್ಕೂ ದ್ವೇಷಕ್ಕೂ ಎಡೆಮಾಡಿಕೊಡುತ್ತದೆ. ನಾವು ಋಜು ಜೀವನವನ್ನು ನಡೆಸುತ್ತಿದ್ದಲ್ಲಿ, ಕೆಲವರಾದರೂ ನಮ್ಮನ್ನು ಅನುಸರಿಸುವ ಪ್ರವೃತ್ತಿಯನ್ನು ಹೊಂದಬಹುದು. ನಾವು ಅಪಮಾರ್ಗದಲ್ಲಿ ನಡೆಯುತ್ತಿದ್ದರೆ, ಅವರೂ ದುರ್ಮಾರ್ಗಿಗಳಾಗುವ ಸಂಭವವೂ ಉಂಟು. ಆದ್ದರಿಂದ ಸಂಸಾರದಲ್ಲಿ ಯಜಮಾನನ, ಊರಿನಲ್ಲಿನ ಹಿರಿಯರಾದವರ ಮತ್ತು ದೇಶದಲ್ಲಿ ನಾಯಕರಾದವರ ಜವಾಬ್ದಾರಿ ಅತ್ಯಂತ ಗುರುತರವಾದದು.

ರಾಜಕೀಯವೋ ಅಥವಾ ಬೇರಾವುದೋ ಜಾತ್ಯತೀತ ವಿಷಯಗಳಲ್ಲಿ ಬಣ್ಣ ಬಣ್ಣದ ಮಾತುಗಳನ್ನಾಡಿ ಜನಸಂಮರ್ದದ ಮನಸ್ಸಿನ ಮೇಲೆ ಪ್ರಭಾವಬೀರಿ ಅವರನ್ನು ಮರಳು ಮಾಡಲು ಸಾಧ್ಯವಾಗಬಹುದು ಆದರೆ ಆಧ್ಯಾತ್ಮಿಕ ರಂಗದಲ್ಲಿ ಈ ಸಾರ್ವಜನಿಕವಾದ ಪ್ರಯತ್ನವು ಪರಿಣಾಮಕಾರಿಯಾಗದು. ದೇವಸ್ಥಾನದ ತೇರನ್ನೆಳೆಯಲು ನೂರಾರು ಜನರನ್ನು ಸೇರಿಸಬಹುದು; ಅದೇ ನಮಗೆ ಹಸಿವಾಗಿದ್ದಾಗ ಜನಸಂದಣಿಯನ್ನು ಕಲೆಹಾಕಿ ಕೊಳ್ಳುವುದರಲ್ಲಿ ಅರ್ಥವಿಲ್ಲ. ಪ್ರತಿಯೊಬ್ಬನು ತನ್ನ ಹಸಿವನ್ನು ನೀಗಿಸಿಕೊಳ್ಳಲು ತಾನೆ ಯತ್ನಿಸಬೇಕು. ಹಾಗೆಯೇ ಆಧ್ಯಾತ್ಮಿಕ ಕ್ಷುಧೆಯುಳ್ಳ ಪ್ರತಿಯೊಬ್ಬನು ಮಾರ್ಗ ತೋರುವಂತೆ ಯಾವನಾದರು ಗುರುವನ್ನು ಆಶ್ರಯಿಸಬೇಕು. ತನ್ನ ಹಸಿವನ್ನು ನೀಗಿಸಿಕೊಳ್ಳುವ ಸಲುವಾಗಿ, ಹಸಿವಿಲ್ಲದವರನ್ನೆಲ್ಲ ಕಲೆಹಾಕಿ ಅವರಿಗೆಲ್ಲ ಹಸಿವಿನಿಂದ ಮುಕ್ತರಾಗಲು ಏನು ಮಾಡಬೇಕೆಂದು ಬೋಧಿಸುವುದರಲ್ಲಿ ಪ್ರಯೋಜನವಿಲ್ಲ. ಭಕ್ತಿ ಶ್ರದ್ಧೆಗಳಿಂದ ಪ್ರಾರ್ಥಿಸದಾತನಿಗೆ ಉಪದೇಶಮಾಡಕೂಡದೆಂದು ಶಾಸ್ತ್ರಗಳು ವಿಧಿಸುತ್ತವೆ. ಪ್ರತಿಯೊಬ್ಬ ಮುಮುಕ್ಷುವೂ ತನ್ನ ಆಧ್ಯಾತ್ಮಿಕ ತೃಷೆಯ ಸ್ವಭಾವ ಮತ್ತು ತೀವ್ರತೆಗಳಿಗೆ ಅನುಗುಣವಾಗಿ ಮತ್ತು ತನ್ನ ಅರ್ಹತೆ ಯೋಗ್ಯತೆಗಳಿಗೆ ಹೊಂದಾಣಿಕೆಯಾಗುವ ಮಾರ್ಗದಲ್ಲಿ ಸರಿಯಾಗಿ ಅಭ್ಯಾಸ ನಡೆಸುತ್ತ, ಫಲದೊರಕುವವರೆಗೆ ಶ್ರದ್ಧೆಯಿಂದ ಸಾಧನೆ ನಡೆಸುವುದೇ ಸೂಕ್ತವಾದುದು.

(ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಪ್ರವಚನಗಳ ಸಂಗ್ರಹ 'ಅವರ್ ಡ್ಯೂಟಿ'ಯಲ್ಲಿ 'ಕಾನ್‌ಕ್ವೆಸ್ಟ್ ಆಫ್ ಡಿಸೈರ್' ಎಂಬ ಅಧ್ಯಾಯದ ರೂಪಾಂತರ)

–ಲ.ನ.ಶಾಸ್ತ್ರಿ

(ಸಾಭಾರ–ಪುಸ್ತಕ ಪ್ರಪಂಚ)

****

ಚೀನಾದ ಜಾನಪದ ಕತೆಗಳು

ದೊಡ್ಡ ಸೊನ್ನೆ ಹಾಗೂ ಚಿಕ್ಕ ಸೊನ್ನೆ

ಒಂದು ಸಾರಿ ಚಿಕ್ಕ ಸೊನ್ನೆಯೊಂದು ಅಕಸ್ಮಾತ್ತಾಗಿ ಜಾರಿ ದೊಡ್ಡ ಸೊನ್ನೆಯೊಳಕ್ಕೆ ಬಿದ್ದುಬಿಟ್ಟಿತು. ಕೂಡಲೇ ದೊಡ್ಡ ಸೊನ್ನೆ ಸಿಟ್ಟಿನಿಂದ "ಅವಿವೇಕಿ, ಮುಟ್ಠಾಳಾ. ನಾಚಿಕೆಯಾಗುವುದಿಲ್ಲವೇ ನಿನಗೆ ! ನಿನಗಿಂತ ನಾನೆಷ್ಟು ದೊಡ್ಡವನೆಂಬುದರ ತಿಳುವಳಿಕೆಯೂ ಇಲ್ಲವೇ ನಿನಗೆ" ಎಂದು ಗುಡುಗಿತು.

ಪುಟ್ಟ ಸೊನ್ನೆ ಸೌಮ್ಯವಾಗಿ "ನೀನು ದೊಡ್ಡವನು ಆಕಾರದಲ್ಲಿ ಎಂಬುದು ನಿಜ, ಆದರೇನು ಪ್ರಯೋಜನ, ಏಸು ಲೆಕ್ಕ? ನಮಗೆಲ್ಲರಿಗೂ ಬೆಲೆ ಒಂದೇ- ನಿನಗೂ ನನಗೂ ಅಷ್ಟೇ-ಏನೂ ಇಲ್ಲ" ಎಂದುತ್ತರಿಸಿತು.

***

ನರಿ, ತೋಳ ಮತ್ತು ಸಿಂಹ

ಒಂದು ನರಿಯೂ ಒಂದು ತೋಳವೂ ಒಮ್ಮೆ ಭೇಟಿಯಾದಾಗ ಪರಸ್ಪರ ಸ್ನೇಹ ಮೊಳೆಯಿತು. ಕೆಲವೇ ದಿನಗಳಲ್ಲಿ ಗಾಢ ಸ್ನೇಹವಾಗಿ ಪರಿಣಮಿಸಿ, ಜತೆಯಲ್ಲಿಯೇ ಇರುತ್ತಿದ್ದವು. ಒಂದು ದಿನ ಎರಡೂ ಸೇರಿ ಒಂದು ಕೋಳಿಯನ್ನು ಹಿಡಿದುಕೊಂಡವು. ಗೌರವ ತೋರಲೆಂದು ಯೋಚಿಸಿದ ನರಿ ತೋಳಕ್ಕೆ ಆ ಕೋಳಿಯನ್ನು ಒಪ್ಪಿಸಿತು. ಆದರೆ ಶ್ರೀಮದ್ಗಾಂಭೀರ್ಯದ ಹಿರಿಮೆಯಿಂದ ತೋಳವು ಅದನ್ನು ಒಪ್ಪಿಸಿಕೊಳ್ಳದೆ, ನರಿಗೇ ಅದನ್ನು ತಿನ್ನುವಂತೆ ಒತ್ತಾಯ ಪಡಿಸಲಾರಂಭಿಸಿತು. ಅದೇ ಗಳಿಗೆಯಲ್ಲಿ ದೊಡ್ಡ ಸಿಂಹವೊಂದು ಅಲ್ಲಿಗೆ ಬಂದು ನಿಂತಿತು. ಬಲಶಾಲಿಯಾದ ಸಿಂಹ ತನ್ನ ಮೇಲೆಲ್ಲಿ ಎರಗುವುದೋ ಎಂದು ಹೆದರಿದ ತೋಳ ದೇಶಾವರಿ ನಗೆ ಸೂಸುತ್ತಾ ಸಿಂಹದ ಬಳಿ ಬಂದು ನಮಸ್ಕರಿಸಿ ಹೊಗಳಲಾರಂಭಿಸಿತು. "ರಾಜಾಧಿರಾಜನೇ, ತಾವು ಈ ಕಡೆಗೆ ದಯಮಾಡಿಸುತ್ತೀರೆಂದು ಮೊದಲೇ ತಿಳಿದ ನಾನು ತಮಗಾಗಿ ಈ ಕೋಳಿಯನ್ನು ಸಿದ್ಧಪಡಿಸಿದ್ದೇನೆ. ಒಪ್ಪಿಸಿಕೊಳ್ಳಿ" ಎಂದಿತು ತೋಳ.

ತೋಳ ತನ್ನ ಮಾತನ್ನು ಮುಗಿಸಿದೊಡನೆ ನರಿ ತಾನೂ ನಕ್ಕು "ಅರಣ್ಯದ ಚಕ್ರವರ್ತಿಯೇ, ತಮ್ಮ ಹಸಿವನ್ನು ಹಿಂಗಿಸಲು ಈ ಅಲ್ಪ ಪ್ರಾಣಿ ಕೋಳಿ ಸಾಲದೆಂಬುದು ನನಗೆ ತಿಳಿದೇ ಈಗ ತಮಗಾಗಿ ಈ ಕೋಳಿಯ ಜತೆಗೆ ತೋಳವನ್ನೂ ಇಲ್ಲಿಗೆ ಕರೆ ತಂದಿದ್ದೇನೆ. ಎರಡನ್ನೂ ತಾವು ಒಪ್ಪಿಸಿಕೊಂಡು ತೃಪ್ತಿಯಾಗಿ ಆರೋಗಣೆ ಮಾಡಬೇಕು, ಪ್ರಭು" ಎಂದಿತು.

ಸಿಂಹವು ತೋಳನ ಮೇಲೆ ಎರಗುತ್ತಿದ್ದಂತೆಯೇ ನರಿಯು ಅಲ್ಲಿಂದ ಪರಾರಿಯಾಯಿತು.

***

ಜನಪದ ನಿಲಯದ ಅಂತರಂಗದಲ್ಲಿ....... ೧೭

–ಸುರೇಂದ್ರ ಕೌಲಗಿ

> ನಾಳೆ ಎಂಬುದು ನಿನ್ನಿನ ಮನಸು
> ಮುಂದೆ ಎಂಬುದು ಇಂದಿನ ಕಣಸು... –ದ. ರಾ. ಬೇಂದ್ರೆ.



ಮೇಲುಕೋಟೆಯ ನೇಕಾರರಿಗೆ ಅವರ ಬಿಡುವಿನ ಸಮಯದಲ್ಲಿ ಖಾದಿ ನೇಯ್ಗೆಯನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಲು ಪ್ರಾರಂಭಿಸಿದೆ. ಅದರ ಫಲವಾಗಿ ಕೆಲವು ನೇಕಾರರು ಮುಂದೆ ಬಂದುದು ನನಗೆ ಸಂತೋಷವನ್ನುಂಟುಮಾಡಿತು. ಅವರಲ್ಲಿ ಪ್ರಮುಖರಾದವರು ಲೋಕಯ್ಯ ಶೆಟ್ಟಿ, ಬಾಗಿಲಾಚೆ ನಾರಾಯಣ ಶೆಟ್ಟಿ ಮುಂತಾದವರು. ಇದೇ ಸುಮಾರಿನಲ್ಲಿ ನನಗೆ ಮೇಲುಕೋಟೆಯಿಂದ ಸುಮಾರು ೧೫ ಕಿ.ಮೀ. ದೂರದ ಹೊನಕೆರೆ ಗ್ರಾಮದಲ್ಲಿದ್ದ ಲೋಕಪಾವನಿ ಖಾದಿ ಕೇಂದ್ರದ ಸುಳಿವು ಸಿಕ್ಕಿತು. ಈ ಕೇಂದ್ರಕ್ಕೆ ಹೋಗಿ ಅಲ್ಲಿಯ ಮುಖ್ಯಸ್ಥರನ್ನು ಪರಿಚಯ ಮಾಡಿಕೊಂಡು ಆ ಕೇಂದ್ರಕ್ಕೂ ಮತ್ತು ಮೇಲುಕೋಟೆಯ ನೇಕಾರರಿಗೂ ಸಂಬಂಧವನ್ನು ಉಂಟುಮಾಡಲು ಸಾಧ್ಯವೇ ಎಂದು ಆಲೋಚನೆ ಮಾಡಲು ಮೊದಲಿಟ್ಟೆ. ಆಗ ನನ್ನ ನೆರವಿಗೆ ಬಂದವರು ಜಗ್ಗು ನಾರಾಯಣ್. ಒಂದರ್ಥದಲ್ಲಿ ನಾನು ಮೇಲುಕೋಟೆಯಲ್ಲಿ ನೆಲಸುವುದಕ್ಕೆ ಮುಖ್ಯ ಕಾರಣಕರ್ತರಲ್ಲಿ ಜಗ್ಗು ನಾರಾಯಣ್ ಒಬ್ಬರು. ನಾನು ಮೇಲುಕೋಟೆಗೆ ಮೈಸೂರಿನಿಂದ ಅವರೊಂದಿಗೇ ಬಂದುದು ಜ್ಞಾಪಕ. ಅವರೇ ನನಗೆ ತಮ್ಮ ಮನೆಯಲ್ಲಿ ಕೆಲವಾರು ದಿನ ಊಟದ ವ್ಯವಸ್ಥೆ ಮಾಡಿ ನಂತರ ಭಕ್ತ ಮಂಡಳಿಯಲ್ಲಿ ಊಟಕ್ಕೂ ಮತ್ತು ವಸತಿಗೂ ಏರ್ಪಾಡು ಮಾಡಿಕೊಟ್ಟರು. ನಾರಾಯಣ್ ಸಹ ಖಾದಿಧಾರಿಯಾಗಿದ್ದರು. ಅವರೊಡನೆ, ಮೇಲುಕೋಟೆಯಲ್ಲಿ ಖಾದಿ ಉತ್ಪಾದಿಸುವ ಸಾಧ್ಯತೆಯನ್ನು ಕುರಿತು ಮಾತನಾಡಿದಾಗ ಅವರು ಸಂತೋಷಪಟ್ಟರು. ಅಲ್ಲದೆ ಈ ಕಾರ್ಯದ ಸಿದ್ಧಿಗಾಗಿ ಸಹಕರಿಸುವುದಾಗಿಯೂ ತಿಳಿಸಿದರು. ಆಗ ನಾನು ಹೊನಕೆರೆಯಲ್ಲಿರುವ ಲೋಕಪಾವನಿ ಖಾದಿ ಕೇಂದ್ರಕ್ಕೆ ಭೇಟಿಕೊಡಬೇಕೆನ್ನುವ ನನ್ನ ಇಚ್ಛೆಯನ್ನು ತಿಳಿಸಿದೆ. ಅವರೂ ಸಹ ನನ್ನೊಟ್ಟಿಗೆ ಅಲ್ಲಿಗೆ ಬರುವುದಾಗಿ ಹೇಳಿದರು. ಅದರಂತೆ ಒಂದು ದಿನ ಬೆಳಿಗ್ಗೆ ಬೇಗ ಅಲ್ಲಿಗೆ ನಡೆದುಕೊಂಡೇ ಹೊರಟೆವು. ಆಗ ಬಸ್

ಸೌಕರ್ಯ ಹೆಚ್ಚಾಗಿ ಇಲ್ಲದೇ ಇದ್ದುದರಿಂದ ನಡೆದುಕೊಂಡು ಹೋಗುವುದೇ ಹೆಚ್ಚು ಅನುಕೂಲವಾಗಿತ್ತು. ಅಲ್ಲದೆ ನಾವಿಬ್ಬರೂ ವಿನೋಬಾರ ಭೂದಾನ ಆಂದೋಲನದಲ್ಲಿ ಪಾದಯಾತ್ರೆ ಮಾಡಿದ್ದುದರಿಂದ ನಡೆದುಕೊಂಡು ಹೋಗುವುದು ವಿಶೇಷವಾದ ಸಂಗತಿಯೇನೂ ಆಗಿರಲಿಲ್ಲ. ಮೇಲುಕೋಟೆಯಿಂದ ರಘುರಾಮಪುರ, ಚಿಣ್ಯ ಮಾರ್ಗವಾಗಿ ಹೊನಕೆರೆಯನ್ನು ಅಡ್ಡದಾರಿ ಮಾರ್ಗವಾಗಿ ತಲುಪಬಹುದಾಗಿತ್ತು. ಈ ಮಾರ್ಗದ ಪರಿಚಯ ಜಗ್ಗು ನಾರಾಯಣರಿಗೆ ತಕ್ಕಮಟ್ಟಿಗೆ ಗೊತ್ತಿತ್ತು. ಖಾದಿ ಕೇಂದ್ರವನ್ನು ತಲುಪಿದೆವು. ಆಗ ಅಲ್ಲಿ ನಾರಾಯಣ ಸ್ವಾಮಿ ಎಂಬುವವರು ವ್ಯವಸ್ಥಾಪಕರಾಗಿದ್ದರು. ಈ ಲೋಕಪಾವನಿ ಖಾದಿ ಕೇಂದ್ರವು ಮೈಸೂರು ರಾಜ್ಯ ಖಾದಿ ಮಂಡಳಿಯ ಧನಸಹಾಯದಿಂದ ನಡೆಯುತ್ತಿತ್ತು. ಈ ಖಾದಿ ಕೇಂದ್ರಕ್ಕೆ ಲೋಕಪಾವನಿ ಎಂದು ಹೆಸರು ಬರುವುದಕ್ಕೆ ಕಾರಣ ಹೊನಕೆರೆಯಿಂದ ಸ್ವಲ್ಪ ದೂರದಲ್ಲಿ ಹರಿಯುತ್ತಿದ್ದ ಲೋಕಪಾವನಿ ಎಂಬ ನದಿ. ಈ ನದಿ ಮಳೆಗಾಲದಲ್ಲಿ ಮಾತ್ರ ತಕ್ಕಮಟ್ಟಿಗೆ ಹರಿಯುತ್ತದೆ. ಉಳಿದಂತೆ ಸಣ್ಣ ತೊರೆಯಾಗಿ ಹರಿಯುತ್ತದೆ. ಈ ಖಾದಿ ಕೇಂದ್ರದಲ್ಲಿ ಆಗ ಕೇವಲ ಎರಡು ಅಥವಾ ಮೂರು ಮಣ್ಣಿನ ಗೋಡೆಗಳ ಮನೆಗಳಿದ್ದವು. ಹಳ್ಳಿಮಾದರಿಯಲ್ಲಿ ಅವು ತಾರಸಿಯನ್ನು ಹೊಂದಿದ್ದವು. ಮಂಗಳೂರು ಹೆಂಚುಗಳ ಛಾವಣಿಯ ಒಂದು ಉದ್ದನೆಯ ಮನೆಯಿತ್ತು. ಈ ಮನೆಯಲ್ಲಿ ನೇಯ್ಗೆಗೆ ಅಗತ್ಯವಾದ ಖಾದಿ ದಾರವನ್ನು ಸಂಗ್ರಹಿಸಿಡಲಾಗಿತ್ತು ಮತ್ತು ನೇಯ್ಗೆಯಾಗಿ ಬಂದ ಖಾದಿ ಬಟ್ಟೆಯನ್ನು ಥಾನುಗಳ ಮಾದರಿಯಲ್ಲಿ ಜೋಡಿಸಿಡಲಾಗಿತ್ತು. ಪ್ರತಿಯೊಂದು ಥಾನಿನ ಮೇಲೂ ಆ ಬಟ್ಟೆಯನ್ನು ನೇಯ್ದ ನೇಕಾರನ ಹೆಸರನ್ನು ಬರೆಯಲಾಗಿರುತ್ತಿತ್ತು. ಆಶ್ಚರ್ಯವೆಂದರೆ ಆ ಕೇಂದ್ರವು ಹೊನಕೆರೆಯಲ್ಲಿದ್ದರೂ ಸಹ ಆ ಗ್ರಾಮದಲ್ಲೇ ಆಗಲಿ ಅಥವಾ ಸುತ್ತಲಿನ ಗ್ರಾಮಗಳಲ್ಲೇ ಆಗಲಿ, ನೂಲುಗಾರಿಕೆ ಅಥವಾ ನೇಯ್ಗೆ ನಡೆಯುತ್ತಿರಲಿಲ್ಲ. ಖಾದಿ ನೂಲಿನ ಉತ್ಪತ್ತಿ ಮತ್ತು ನೇಯ್ಗೆ ನಡೆಯುತ್ತಿದ್ದುದು ಹೊನಕೆರೆಯಿಂದ ಸುಮಾರು ೧೦-೧೫ ಕಿ. ಮೀ. ದೂರದಲ್ಲಿಯ ಜವನಹಳ್ಳಿ ಮತ್ತು ಮಲ್ಲೇನಹಳ್ಳಿಗಳಲ್ಲಿ. ಈ ಹಳ್ಳಿಗಳಲ್ಲಿ ಇದ್ದ ಹರಿಜನರು ಖಾದಿ ಉದ್ಯಮದಲ್ಲಿ ತೊಡಗಿದ್ದರು. ಅವರಿಗೆ ಖಾದಿ ದಾರವನ್ನು ಪೂರೈಸುವುದು, ನೇಯ್ಗೆ ಮಾಡಿಸುವುದು ಮತ್ತು ಕೂಲಿಕೊಡುವುದು ಇತ್ಯಾದಿ ಕೆಲಸಗಳು ಲೋಕಪಾವನಿ ಖಾದಿ ಕೇಂದ್ರದಲ್ಲಿ ನಡೆಯುತ್ತಿತ್ತು. ಈ ವ್ಯವಹಾರವನ್ನೆಲ್ಲ ನಾರಾಯಣಸ್ವಾಮಿಯವರು ನೋಡಿಕೊಳ್ಳುತ್ತಿದ್ದರು. ಕೆಲವೊಂದು ಸಲ ಮಳವಳ್ಳಿ ತಾಲ್ಲೂಕಿನ ಕಾಡುಕೊತ್ತನಹಳ್ಳಿಯಲ್ಲಿದ್ದ ಹರಿಜನ ನೇಕಾರರೂ ಸಹ ಈ ಕೇಂದ್ರದ ಪ್ರಯೋಜನ ಪಡೆಯುತ್ತಿದ್ದರು. ನಾರಾಯಣಸ್ವಾಮಿಯವರು ತಮ್ಮ ಹೆಂಡತಿ ಮತ್ತು ಮಗಳೊಂದಿಗೆ

ಒಂದು ಚಿಕ್ಕ ಮನೆಯಲ್ಲಿ ಕೇಂದ್ರದ ಆವರಣದಲ್ಲಿಯೆ ವಾಸವಾಗಿದ್ದರು. ನೀರಿನ ಸರಿಯಾದ ಪೂರೈಕೆ ಇರಲಿಲ್ಲ, ವಿದ್ಯುತ್‌ಶಕ್ತಿಯ ಪೂರೈಕೆಯೂ ಸಹ ಇರಲಿಲ್ಲ. ಅಂಗಡಿಗಳೂ ಇಲ್ಲದಂಥ ಒಂದು ಪುಟ್ಟ ಗ್ರಾಮವಾಗಿತ್ತು. ಹತ್ತಿರದ ದೊಡ್ಡ ಊರೆಂದರೆ ಚಿಣ್ಯ. ಅದು ಹೊನಕೆರೆಯಿಂದ ಸುಮಾರು ಒಂದು ಕಿ.ಮೀ. ದೂರ. ಇಂಥ ಏಕಾಂತವಾದ ಸ್ಥಳದಲ್ಲಿ ನಾರಾಯಣಸ್ವಾಮಿಯವರು ಖಾದಿ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದುದನ್ನು ನೋಡಿ ನನಗೆ ಆಶ್ಚರ್ಯವಾಯಿತು ಜೊತೆಗೆ ಸಂತೋಷವು ಅಯಿತು. ಜಗ್ಗು ನಾರಾಯಣ್ ಮತ್ತು ನಾನು ಅಲ್ಲಿಗೆ ಹೋದಾಗ ನಾರಾಯಣಸ್ವಾಮಿಯವರು ಬಹಳ ಪ್ರೀತಿಯಿಂದ ಸ್ವಾಗತಿಸಿ ಆದರಾತಿಥ್ಯವನ್ನು ಮಾಡಿದರು. ತಮ್ಮ ಖಾದಿ ಕ್ಷೇತ್ರದ ಅನುಭವಗಳನ್ನು ಹೇಳಿದರು. ಅವರಿಗು ಸಹ ನೇಕಾರರ ಅಗತ್ಯವಿತ್ತು. ಆದ್ದರಿಂದ ಮೇಲುಕೋಟೆಯಲ್ಲಿ ಯಾರಾದರೂ ನೇಕಾರರು ನೇಯ್ಗೆ ಮಾಡುವುದಾದರೆ ಮತ್ತು ನಾನು ಆ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳುವುದಾದರೆ ನೇಯ್ಗೆಗಾಗಿ ಖಾದಿ ನೂಲನ್ನು ಕೊಡಲು ಅವರು ಸಮ್ಮತಿಸಿದರು. ನನಗೆ ತುಂಬಾ ಸಂತೋಷವಾಯಿತು. ಆದಷ್ಟು ಬೇಗ ಆಸಕ್ತಿಯುಳ್ಳ ನೇಕಾರರನ್ನು ಕಳುಹಿಸಿಕೊಡುವುದಾಗಿ ಹೇಳಿ ಮೇಲುಕೋಟೆಗೆ ಬಂದೆ. ಆನಂತರ ಪುನಃ ಹಲವಾರು ಬಾರಿ ಹೊನಕೆರೆಗೆ ಹೋಗಿಬಂದು ಮೇಲುಕೋಟೆಯಲ್ಲಿ ಖಾದಿ ಉತ್ಪನ್ನವನ್ನು ಪ್ರರಂಭಿಸಲು ವ್ಯವಸ್ಥೆ ಮಾಡಿದೆ. ಖಾದಿ ಉದ್ಯೋಗದಲ್ಲಿ ತೊಡಗಿದ ನೇಕಾರರ ಮನೆಗಳಿಗೆ ಆಗಾಗ್ಗೆ ಹೋಗಿಬರುತ್ತಿದ್ದೆ ಮತ್ತು ಅವರ ಅಭಿಪ್ರಾಯಗಳನ್ನು ತಿಳಿಯುತ್ತಿದ್ದೆ. ಆಗ ನೇಕಾರರಿಗೆ ಜೀವನಕ್ಕೆ ಎಷ್ಟು ಕಷ್ಟವಿತ್ತೆಂದರೆ ನೇಯ್ಗೆಯಲ್ಲಿ ತೊಡಗಿದ್ದ ನೇಕಾರರು ತಮಗೆ ನೇಯ್ಗೆಗೆ ದಾರ ಬೇಕಾದಾಗಲೆಲ್ಲ ೧೦-೧೫ ಕಿ. ಮೀ. ದೂರ ನಡೆದುಕೊಂಡೇ ಹೊನಕೆರೆಗೆ ಹೋಗಿಬರುತ್ತಿದ್ದರು. ಈ ರೀತಿಯಿಂದಾಗಿ ೨-೩ ವರ್ಷ ನಡೆಯಿತು. ಈ ಕೆಲಸದಿಂದ ನನಗೆ ನೇಕಾರರ ಬಗ್ಗೆ ಮತ್ತು ಖಾದಿ ಕೆಲಸದ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಅನುಭವ ದೊರೆಯಿತು. ಭಾರತದ ಹಳ್ಳಿಗಳ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಖಾದಿ ವಿಚಾರವನ್ನು ದೇಶದ ಮುಂದೆ ಇಟ್ಟ ಗಾಂಧೀಜಿಯವರ ಆ ದೂರದೃಷ್ಟಿ ಮತ್ತು ಗ್ರಾಮಗಳ ಬಗೆಗಿನ ಅವರ ಪ್ರೀತಿ ನನಗೆ ಅರ್ಥವಾದವು.

(ಮುಂದುವರೆಯುವುದು........)

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು



ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(-ಸಂಪಾದಕರು)

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com